# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಮಂಗಳವಾರ, ಏಪ್ರಿಲ್ 04, 2023

ಸಂಪುಟ : 49 ಸಂಚಿಕೆ : 321 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com






# ದಾವಣಗೆರೆ ಕಾಂಗ್ರೆಸ್ ಅಭ್ಯರ್ಥಿಗಳಿಂದ ಪ್ರಚಾರ ಶುರು

ದಾವಣಗೆರೆ, ಏ.3- ವಿಧಾನಸಭೆ ಚುನಾವಣೆ ಕಾವು ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದ್ದು, ದಾವಣಗೆರೆ ದಕ್ಷಿಣ ಹಾಗೂ ಉತ್ತರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಗಳಾದ ಶಾಮನೂರು ಶಿವಶಂಕರಪ್ಪ ಹಾಗೂ ಅವರ ಪುತ್ರ ಎಸ್.ಎಸ್. ಮಲ್ಲಿಕಾರ್ಜುನ್ ಸೋಮವಾರ ಚುನಾವಣಾ ಪ್ರಚಾರ ಆರಂಭಿಸಿದರು.

ಸಮೀಪದ ಆನೆಕೊಂಡದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ಸೋಮವಾರ ವಿಶೇಷ ಪೂಜೆ ಸಲ್ಲಿಸುವ ಮೂಲಕ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಶಾಮನೂರು ಶಿವಶಂಕರಪ್ಪ ಅವರು ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿದರು.

ಶಿವಶಂಕರಪ್ಪನವರು ಅವರ ಪುತ್ರ ಮಲ್ಲಿಕಾರ್ಜುನ್, ಸೊಸೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರೊಂದಿಗೆ ಆನೆಕೊಂಡದ ಶ್ರೀ ಬಸವೇಶ್ವರ ದೇವಸ್ಥಾನಕ್ಕೆ ಆಗಮಿಸಿ, ಪಕ್ಷದ ಕಾರ್ಯಕರ್ತರು ಮತ್ತು ಅಭಿಮಾನಿಗಳೊಂದಿಗೆ ಶ್ರೀ ಬಸವೇಶ್ವರ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಅಧಿಕೃತವಾಗಿ ಚುನಾವಣಾ ಪ್ರಚಾರ ಕೈಗೊಂಡರು.

ಪಕ್ಷದ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರೆ, ಡೊಳ್ಳು ಕುಣಿತ ತಂಡವು ಪ್ರಚಾರದ ಮೆರವಣಿಗೆಗೆ ವಿಶೇಷ ಮೆರಗು ನೀಡಿದರು. ಶಾಮನೂರು ಶಿವಶಂಕರಪ್ಪ ಅವರು ವಾಹನದಲ್ಲಿ ಪಕ್ಷದ ಕಾರ್ಯಕರ್ತ ರೊಂದಿಗೆ ಕುಳಿತು ಮತ ಯಾಚಿಸಿದರು.

ನಂತರ ಪುತ್ರ ಎಸ್ಸೆಸ್ಸೆಂ ಪತ್ನಿಯೊಂದಿಗೆ ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಈಶ್ವರ ದೇಗುಲದಲ್ಲಿ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಚುನಾವಣಾ ಪ್ರಚಾರ ಆರಂಭಿಸಿದರು.

ಇದಕ್ಕೂ ಮುನ್ನ ಎಸ್ಸೆಸ್ಸೆಂ ಅವರು ಶಾಮನೂರಿಗೆ ಆಗಮಿಸುತ್ತಿದ್ದಂತೆಯೇ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಜಮಾಯಿಸಿ ಜೈಕಾರ ಹಾಕಿದರು. ಕಾರ್ಯಕರ್ತರು ಪಟಾಕಿ ಸಿಡಿಸಿದರು. ಮಲ್ಲಿಕಾರ್ಜುನ್ ಅವರು ದೇವಸ್ಥಾನಕ್ಕೆ ಬರುತ್ತಿದ್ದಂತೆ ನೂಕು ನುಗ್ಗಲು ಉಂಟಾಯಿತು. ಕೆಲವರು ಅವರಿಗೆ ಹೂವಿನ ಹಾರ ಹಾಕುವ ಮೂಲಕ ಬರಮಾಡಿಕೊಂಡರು.

## ಅಲ್ಪಸಂಖ್ಯಾತರಲ್ಲಿ ಅಸಮಾಧಾನವಿಲ್ಲ: ಎಸ್ಸೆಸ್

ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಅಸಮಾಧಾನಗೊಂಡಿದ್ದಾರೆ ಎಂಬುದು ಸತ್ಯಕ್ಕೆ ದೂರ ಎಂದು ಶಾಮನೂರು ಶಿವಶಂಕರಪ್ಪ ಹೇಳಿದರು.

ಚುನಾವಣಾ ಪ್ರಚಾರದ ವೇಳೆ ಮಾಧ್ಯಮ ದವರೊಂದಿಗೆ ಮಾತನಾಡಿದ ಅವರು, ತಮಗೆ ಟಿಕೆಟ್ ದೊರೆತಿರುವುದರಿಂದ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರೂ ನಮ್ಮ ಜೊತೆಗಿದ್ದಾರೆ. ದಕ್ಷಿಣದಲ್ಲಿ ಮುಸ್ಲಿಮರ ಬೆಂಬಲ ಇದೆ. ಅಸಮಾಧಾನಗೊಂಡಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ಮಾತು ಎಂದರು.

ಎಲ್ಲೆಡೆ ಕಾಂಗ್ರೆಸ್ ಪರ ಅಲೆ ಇದೆ. ನನಗೆ ಪ್ರತಿಸ್ಪರ್ಧಿಯೇ ಇಲ್ಲ. ಜನರ ಬೆಂಬಲ, ಆಶೀರ್ವಾದ ನಮ್ಮ ಮೇಲಿದೆ. ನಮ್ಮ ವಿರುದ್ಧ ಹಿಂದೆ ಸ್ಪರ್ಧಿಸಿದ್ದವರು ಸೋತಿದ್ದಾರೆ. ಈ ಬಾರಿಯು ಅದೇ ಫಲಿತಾಂಶ ಬರಲಿದ್ದು, ಚುನಾವಣೆಯಲ್ಲಿ ಗೆಲುವು ಖಚಿತ ಎಂದು ಹೇಳಿದರು.

## ಬಿಜೆಪಿ ಭ್ರಷ್ಟಾಚಾರಕ್ಕೆ ಜನ ಬೇಸತ್ತಿದ್ದಾರೆ: ಎಸ್ಸೆಸ್ಸೆಂ

ದಾವಣಗೆರೆ, ಏ. 3- ಬಿಜೆಪಿ ಭ್ರಷ್ಟಾಚಾರದ ಬಗ್ಗೆ ಜನರು ರೋಸಿ ಹೋಗಿದ್ದಾರೆ. 40 ಪರ್ಸೆಂಟ್ ಸರ್ಕಾರ ಎಂಬುದು ಜಗಜ್ಜಾಹೀರಾಗಿದೆ. ಉತ್ತರ ಕ್ಷೇತ್ರದ ಅಭಿವೃದ್ಧಿ ಹೊಂದಬೇಕೆಂಬ ಭಾವನೆ ಜನರಲ್ಲಿದೆ ಎಂದು ಎಸ್. ಎಸ್. ಮಲ್ಲಿಕಾರ್ಜುನ್ ಹೇಳಿದರು.

ಕಳೆದ ಐದು ವರ್ಷದಲ್ಲಿ ಯಾವ ಅಭಿವೃದ್ಧಿ ಯಾಗಿದೆ ಎಂಬುದನ್ನು ಎಲ್ಲರೂ ನೋಡಿದ್ದಾರೆ. ಸ್ಪರ್ಧೆ ಮಾಡುವಂತೆ ಜನರೇ ಈ ಬಾರಿ ಒತ್ತಾಯ ಮಾಡಿದ್ದಾರೆ. ಎಲ್ಲೆಡೆ ಪಕ್ಷದ ಪರ ಅಲೆ ಇದೆ. ಇದು ನಮಗೂ ಹುಮ್ಮಸ್ಸು ತಂದಿದೆ ಎಂದರು.

ಅವರದ್ದೇ ಅಧಿಕಾರವಿದೆ. ನಮ್ಮನ್ನು ಹೆದರಿಸಲು ಹೊರಟಿದ್ದಾರೆ. ಇಂತವನ್ನು ಬೇಕಾದಷ್ಟು ನೋಡಿದ್ದೇವೆ ಎಂದು ಮತದಾರರಿಗೆ ಆಮಿಷ ಒಡ್ಡಿದ ಪ್ರಕರಣಕ್ಕೆ ಸಂಬಂಧಿಸಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ಮಾನಹಾನಿ ಪ್ರಕರಣ ರಾಹುಲ್‌ಗೆ ಜಾಮೀನು

## ಶಿಕ್ಷೆಯ ತಡೆಯಾಜ್ಞೆ ಕುರಿತು ಏ.13ಕ್ಕೆ ವಿಚಾರಣೆ



ನವದೆಹಲಿ, ಏ. 3 – ಮೋದಿ ಉಪನಾಮಕ್ಕೆ ಸಂಬಂಧಿಸಿದ ಮಾನಹಾನಿ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಗೆ ಸೂರತ್ ನ್ಯಾಯಾಲಯ ಜಾಮೀನು ನೀಡಿದೆ. 2019ರ ಮಾನಹಾನಿ ಪ್ರಕರಣದಲ್ಲಿ ವಿಧಿಸಲಾಗಿರುವ ಎರಡು ವರ್ಷಗಳ ಶಿಕ್ಷೆಗೆ ತಡೆಯಾಜ್ಞೆ ಹೊರಡಿಸುವ ಕುರಿತು ಏಪ್ರಿಲ್ 13ರಂದು ವಿಚಾರಣೆ ನಡೆಯಲಿದೆ.

ಮಾರ್ಚ್ 23ರಂದು ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತಮಗೆ ನೀಡಿರುವ ಶಿಕ್ಷೆಯನ್ನು ಪ್ರಶ್ನಿಸಿ ರಾಹುಲ್ ಗಾಂಧಿ ಸೆಷನ್ಸ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಎರಡು ವರ್ಷಗಳ ಶಿಕ್ಷೆಯಾದ ಕಾರಣ ರಾಹುಲ್ ಗಾಂಧಿ ಲೋಕಸಭಾ ಸ್ಥಾನದಿಂದ ಅನರ್ಹಗೊಂಡಿದ್ದರು.

ಮ್ಯಾಜಿಸ್ಟ್ರೇಟ್ ನ್ಯಾಯಾಲಯ ನೀಡಿರುವ ತೀರ್ಪು ತಪ್ಪಿನಿಂದ ಕೂಡಿದೆ ಹಾಗೂ ತಾವು ಸಂಸತ್ತಿನಿಂದ ಅನರ್ಹಗೊಳ್ಳಲಿ ಎಂಬ ರೀತಿಯಲ್ಲಿ ಶಿಕ್ಷೆ ಘೋಷಿಸಲಾಗಿದೆ ಎಂದು ರಾಹುಲ್ ಗಾಂಧಿ ತಮ್ಮ ಅರ್ಜಿಯಲ್ಲಿ ಹೇಳಿದ್ದಾರೆ.

ನಾನು ಸಂಸದ ಎಂಬ ವಿಷಯದಿಂದ ವಿಚಾರಣಾ ನ್ಯಾಯಾಲಯ ಹೆಚ್ಚಾಗಿ ಪ್ರಭಾವಿತವಾಗಿದೆ. ಮೋದಿ ಸಮಾಜ ಅಥವಾ ಮೋದಿ ಸಮುದಾಯ ಎಂಬ ಯಾವುದೇ ದಾಖಲೆ ಇಲ್ಲ. ಅನರ್ಹವಾಗಲಿ ಎಂಬ ರೀತಿಯಲ್ಲಿ ಶಿಕ್ಷೆ ವಿಧಿಸಲಾಗಿದೆ ಎಂದವರು ತಿಳಿಸಿದ್ದಾರೆ.

ಪ್ರತಿಪಕ್ಷದ ನಾಯಕರಾಗಿರುವ ಕಾರಣಕ್ಕೆ ಮಾತುಗಳನ್ನು ಬಂಗಾರದ ತಕ್ಕಡಿಯಲ್ಲಿ ಅಳೆಯಲು ಸಾಧ್ಯವಿಲ್ಲ. ಮೋದಿ ಉಪನಾಮದ ಕುರಿತು ಆಡಿದ ಮಾತುಗಳ ತಿರುಳನ್ನಷ್ಟೇ ಪರಿಗಣಿಸಬೇಕು. ಯಾವ ರೀತಿಯಲ್ಲಿ ಮಾತನಾಡಲಾಗಿದೆ ಎಂಬುದು ಮುಖ್ಯವಲ್ಲ. ಬಲಿಷ್ಠ ಹಾಗೂ ಮಣಿಯದ ಪ್ರತಿಪಕ್ಷ ನಿಜವಾದ ಹಾಗೂ ಆರೋಗ್ಯಕರ ಪ್ರಜಾಪ್ರಭುತ್ವದ ತಿರುಳು ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ವಾದ ಆಲಿಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಮೂರ್ತಿ ಆರ್.ಪಿ. ಮೋಗೇರ, ರಾಹುಲ್ ಗಾಂಧಿ ಅವರಿಗೆ ಜಾಮೀನು ನೀಡಿದ್ದಾರೆ. ಮ್ಯಾಜಿಸ್ಟ್ರೇಟ್ ನ್ಯಾಯಾಲಯ ವಿಧಿಸಿರುವ ಜೈಲು ಶಿಕ್ಷೆ ತಡೆಯಬೇಕೆಂಬ ಅರ್ಜಿಯ ವಿಚಾರಣೆಯನ್ನು ಏಪ್ರಿಲ್ 13ರಂದು ನಡೆಸಲಾಗುವುದು.

ಶಿಕ್ಷೆ ತಡೆಯಬೇಕೆಂಬ ಅರ್ಜಿಯ ಹಿನ್ನೆಲೆಯಲ್ಲಿ, ದೂರುದಾರ ಸಂಸದ ಪೂರ್ಣೇಶ್ ಮೋದಿ ಅವರಿಗೆ ನ್ಯಾಯಾಲಯ ನೋಟಿಸ್ ಕಳಿಸಿದೆ.

ಇದಕ್ಕೂ ಮುಂಚೆ ರಾಹುಲ್ ಗಾಂಧಿ ಅವರು ತಮ್ಮ ಸಹೋದರಿ ಪ್ರಿಯಾಂಕ ಗಾಂಧಿ ವಾದ್ರಾ ಹಾಗೂ ಕಾಂಗ್ರೆಸ್‌ನ ಹಿರಿಯ ನಾಯಕರೊಂದಿಗೆ ಬಸ್‌ನಲ್ಲಿ ನ್ಯಾಯಾಲಯಕ್ಕೆ ಬಂದರು. ದೊಡ್ಡ ಸಂಖ್ಯೆಯಲ್ಲಿ ಪಕ್ಷದ (3ನೇ ಪುಟಕ್ಕೆ)

# 23ರ ಸಾಲಿನಲ್ಲಿ ತೆರಿಗೆ ಸಂಗ್ರಹ 19.68 ಲಕ್ಷ ಕೋಟಿ ರೂ.

ನವದೆಹಲಿ, ಏ. 3 – 2022-23ರ ಸಾಲಿನಲ್ಲಿ ನೇರ ತೆರಿಗೆ ಸಂಗ್ರಹ ಶೇ.20ರಷ್ಟು ಹೆಚ್ಚಾಗಿ 19.68 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಇದು ಸರ್ಕಾರದ ಪರಿವರ್ತಿತ ಗುರಿಗಿಂತ ಹೆಚ್ಚಾಗಿದೆ.

ರೀಫಂಡ್ ಹೊಂದಾಣಿಕೆ ಮಾಡಿದ ನಂತರ ಆದಾಯ ತೆರಿಗೆ ಪ್ರಮಾಣ ಶೇ.18ರಷ್ಟು ಹೆಚ್ಚಾಗಿ 16.61 ಲಕ್ಷ ಕೋಟಿ ರೂ.ಗಳಿಗೆ ತಲುಪಿದೆ. ಸರ್ಕಾರ ಬಜೆಟ್‌ನಲ್ಲಿ 14.20 ಲಕ್ಷ ಕೋಟಿ ರೂ.ಗಳ ನೇರ ತೆರಿಗೆ ಸಂಗ್ರಹದ ಗುರಿ ಹೊಂದಿತ್ತು. ನಂತರ ಆ ಗುರಿಯನ್ನು 16.50ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿತ್ತು.

## ಕಚ್ಚಾ ತೈಲ ಬೆಲೆ ಶೇ.6 ರಷ್ಟು ಹೆಚ್ಚಳ

ಬ್ಯಾಂಕಾಕ್ ಏ. 3-ಸೌದಿ ಅರೇಬಿಯಾ ಹಾಗೂ ಇತರೆ ಪ್ರಮುಖ ಕಚ್ಚಾ ತೈಲ ಉತ್ಪಾದನಾ ದೇಶಗಳು ತೈಲ ಉತ್ಪಾದನೆ ಕಡಿತಗೊಳಿಸುವುದಾಗಿ ಪ್ರಕಟಿಸಿರುವ ಹಿನ್ನೆಲೆಯಲ್ಲಿ, ತೈಲ ಬೆಲೆ ಸೋಮವಾರ ಶೇ.6 ರಷ್ಟು ಹೆಚ್ಚಳವಾಗಿದೆ.

ಬರುವ ಮೇ ತಿಂಗಳಿನಿಂದ ಅನ್ವಯವಾಗುವಂತೆ ಪ್ರತಿದಿನ 1.15 ಲಕ್ಷ ಬ್ಯಾರಲ್ ತೈಲ ಉತ್ಪಾದನೆ ಕಡಿತಗೊಳಿಸಲು ನಿರ್ಧರಿಸಲಾಗಿದೆ.

ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 4.24 ಡಾಲರ್ ಹೆಚ್ಚಾಗಿ 79.91 ಡಾಲರ್‌ಗಳಿಗೆ ತಲುಪಿದೆ. ದುಬಾರಿಯಾಗುತ್ತಿರುವ ತೈಲ ಬೆಲೆ ಹಲವು ದೇಶಗಳಿಗೆ ಹೊರೆಯಾಗಿದೆ. ಇದು ಆರ್ಥಿಕ ಸಮಸ್ಯೆಗಳಿಗೂ ಕಾರಣವಾಗಲಿದೆ. ಯುರೋಪ್ ಈಗಾಗಲೇ ಹಣದುಬ್ಬರಕ್ಕೆ ಸಿಲುಕಿದೆ. ತೈಲ ಬೆಲೆ ಏರಿಕೆ ಇನ್ನಷ್ಟು ಸಮಸ್ಯೆಗೆ ಕಾರಣವಾಗಲಿದೆ. ಅಮೆರಿಕದಲ್ಲೂ ಹಣದುಬ್ಬರ ಹೆಚ್ಚಾಗಲಿದೆ ಎಂದು ಆರ್ಥಿಕ ಪರಿಣಿತರು ತಿಳಿಸಿದ್ದಾರೆ.

# ಎರಡ್ಮೂರು ದಿನಗಳಲ್ಲಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ: ಯಡಿಯೂರಪ್ಪ

ಶಿಕಾರಿಪುರ, ಮಾ. 3- ರಾಜ್ಯದ ಎಲ್ಲಾ ಕ್ಷೇತ್ರಗಳ ಬಗ್ಗೆ ಎರಡು ದಿನಗಳ ಕಾಲ ಚರ್ಚೆ ನಡೆಸಿದ್ದು, ಮುಂದಿನ ಎರಡು, ಮೂರು ದಿನಗಳಲ್ಲಿ ದೆಹಲಿಗೆ ಹೋಗಿ ಅಭ್ಯರ್ಥಿಗಳ ಪಟ್ಟಿ ರಿಲೀಸ್ ಮಾಡಿಸುತ್ತೇವೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಪಟ್ಟಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಿಜಯೇಂದ್ರ ಬೇರೆ ಕ್ಷೇತ್ರದಲ್ಲಿ ನಿಲ್ಲಬೇಕು ಎಂಬ ಒತ್ತಡ ಇತ್ತು. ಆದರೆ ಶಿಕಾರಿಪುರದಿಂದಲೇ ವಿಜಯೇಂದ್ರ ಸ್ಪರ್ಧಿಸಲಿದ್ದಾರೆ ಎಂದು ಹೇಳಿದರು.

ವಿಜಯೇಂದ್ರ ಈ ಕ್ಷೇತ್ರದಲ್ಲಿ ಹೆಚ್ಚಿನ ಮತಗಳ ಅಂತರದಿಂದ ಗೆಲುವು ಸಾಧಿಸುತ್ತಾರೆ ಎಂಬ ವಿಶ್ವಾಸವಿದೆ. ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸ್ಪಷ್ಟ ಬಹುಮತ ಪಡೆಯಲಿದ್ದು, ನಾವೇ ಅಧಿಕಾರ ನಡೆಸಲಿದ್ದೇವೆ ಎಂದರು.

## ಗುಂಡು ಹಾರಿಸಿಕೊಂಡು ಯೋಧ ಹದಡಿಯ ನಾಗರಾಜ್ ಆತ್ಮಹತ್ಯೆ



ದಾವಣಗೆರೆ, ಏ.3- ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಯೋಧರೊಬ್ಬರು ಗುಂಡು ಹಾರಿಸಿಕೊಂಡು ಭಾನುವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ತಾಲ್ಲೂಕಿನ ಹದಡಿ ಗ್ರಾಮದ ನಾಗರಾಜು (32) ಆತ್ಮಹತ್ಯೆ ಮಾಡಿಕೊಂಡವರು. (4ನೇ ಪುಟಕ್ಕೆ)

# ಕಾಂಗ್ರೆಸ್‌ಗೆ ಸಂವಿಧಾನದ ಮೇಲೆ ನಂಬಿಕೆ ಇಲ್ಲ

## ಮೀಸಲಾತಿ ಕುರಿತ ಸುರ್ಜೇವಾಲಾ ಟೀಕೆಗೆ ಮುಖ್ಯಮಂತ್ರಿ ಬೊಮ್ಮಾಯಿ ತರಾಟೆ



ಬೆಂಗಳೂರು, ಏ. 3 - ಕಾಂಗ್ರೆಸ್‌ಗೆ ಅಂಬೇಡ್ಕರ್ ಅವರ ಮೇಲೆಯಾಗಲೀ, ಅವರು ಬರೆದಿರುವ ಸಂವಿಧಾನದ ಮೇಲೆಯಾಗಲೀ ನಂಬಿಕೆ ಇಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕಾಂಗ್ರೆಸ್ ವಕ್ತಾರರು ಹಾಗೂ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಮೀಸಲಾತಿ ಬಗ್ಗೆ ಟ್ವೀಟ್ ಮಾಡಿರುವ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಮೀಸಲಾತಿ ನೀಡಿರುವುದು ಕಾನೂನು ಬಾಹಿರ, ಸಂವಿಧಾನ ವಿರೋಧಿ ಎಂದು ಕೆಳಮಟ್ಟದ ಶಬ್ದಗಳನ್ನು ಬಳಸಿದ್ದಾರೆ ಎಂದರು.

ಮೀಸಲಾತಿ ಕುರಿತು ಟ್ವೀಟ್ ಮಾಡಿದ್ದ ಸುರ್ಜೇವಾಲಾ, ಡಬಲ್ ಇಂಜಿನ್ ಸರ್ಕಾರದಿಂದ ಡಬಲ್ ದ್ರೋಹವಾಗಿದೆ. ಪರಿಶಿಷ್ಟರ ವಿರೋಧಿ ನಿಲುವು ಬಿಜೆಪಿಯ ಡಿ.ಎನ್.ಎ.ದಲ್ಲಿದೆ. ಕಳೆದ 90 ದಿನಗಳಲ್ಲಿ ಮೂರು ಬಾರಿ ಮೀಸಲಾತಿ ಬದಲಿಸಲಾಗಿದೆ ಎಂದಿದ್ದರು.

ಜನಸಂಖ್ಯೆ ಆಧಾರಿತವಾಗಿ ಮೀಸಲಾತಿ ನೀಡಬೇಕು ಎಂದು ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಗಿದೆ. ಎಸ್.ಸಿ/ ಎಸ್.ಟಿ ಸಮುದಾಯಗಳ ಬಹು ವರ್ಷಗಳ ಬೇಡಿಕೆಯನ್ನು ಈಡೇರಿಸಿ, ಸಂವಿಧಾನದ ಪರಿಚ್ಛೇದ 9ಕ್ಕೆ ಸೇರಿಸಲು ಶಿಫಾರಸ್ಸು ಮಾಡಲಾಗಿದೆ ಎಂದರು.

ಅವರ ಕಾಲದಲ್ಲಿ ಏನೂ ಮಾಡದೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ಬರೀ ಮತ ಬ್ಯಾಂಕ್‌ಗಾಗಿ ಬಳಕೆ ಮಾಡಲಾಗಿದೆ ಎಂದ ಅವರು, ನ್ಯಾ.ನಾಗಮೋಹನ್‌ದಾಸ್ ವರದಿ ಬಂದು 4 ವರ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದಾರೆ ಎಂದರು.

ಯಡಿಯೂರಪ್ಪನವರ ಅವಧಿಯಲ್ಲಿ ವರದಿ ಬಂದ ಆರು ತಿಂಗಳಿಗೆ ವಿಸ್ತರಣೆ ಮಾಡಿದರು. ನನ್ನ ಅವಧಿಯಲ್ಲಿ ಸರ್ವ ಪಕ್ಷಗಳ ಸಭೆ ಕರೆದು ಒಪ್ಪಿಗೆ ಪಡೆಯಲಾಯಿತು. ನಂತರ ಸಚಿವ ಸಂಪುಟದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಪರ ನಿರ್ಣಯ ಕೈಗೊಳ್ಳಲಾಯಿತು. ಸರ್ಕಾರ ಆದೇಶ ಹೊರಡಿಸಿ ಶೆಡ್ಯೂಲ್ 9 ಕ್ಕೆ ಸೇರಿಸಲಾಗಿದೆ ಎಂದು ಹೇಳಿದರು.

ನಾವು ಸಾಮಾಜಿಕ ನ್ಯಾಯದ ಪರಿಪಾಲನೆ ಮಾಡಿರುವುದನ್ನು ಟೀಕೆ ಮಾಡುತ್ತಿದ್ದಾರೆ. ಕಾಂಗ್ರೆಸ್ ದಲಿತ, ಹಿಂದುಳಿದ ವರ್ಗ, ಲಿಂಗಾಯತ, ಒಕ್ಕಲಿಗರ ವಿರೋಧಿಯಾಗಿದೆ. ಎಲ್ಲರಿಗೂ ನ್ಯಾಯ ಕೊಡಿಸುವ ಕೆಲಸ ಮಾಡುತ್ತಿದ್ದೇವೆ ಎಂದರು.

ಅಧಿಕಾರಕ್ಕೆ ಬಂದ ಮೇಲೆ ಹಿಂಪಡೆಯುವುದಾಗಿ ಕಾಂಗ್ರೆಸ್ ಹೇಳುತ್ತಿದೆ. ಅವರು ಅಧಿಕಾರಕ್ಕೆ ಬರುವ ಪ್ರಶ್ನೆಯೇ ಇಲ್ಲ. ಇದನ್ನು ಹಿಂದೆ ತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ. ಅವರಿಗೆ ಶಕ್ತಿಯೂ ಇಲ್ಲ ಅವಕಾಶವೂ ಇಲ್ಲ. ಇದನ್ನ ನಾನು ತೀವ್ರವಾಗಿ ಖಂಡಿಸುತ್ತೇನೆ ಎಂದ ಮುಖ್ಯಮಂತ್ರಿಗಳು, ನಮ್ಮ ಕೆಲಸ ನೋಡಿ ತಳಮಳಗೊಂಡು ಈ ರೀತಿ ಮಾಡುತ್ತಿದ್ದಾರೆ ಎಂದರು.

# ಹಜ್ ಯಾತ್ರಿಗಳಿಗೆ ವಿಶೇಷ ಸೌಲಭ್ಯ

ನವದೆಹಲಿ, ಏ. 3 – ಹಜ್ ಯಾತ್ರೆಗೆ ತೆರಳುವವರಿಗೆ ಅಗತ್ಯ ವಿನಿಮಯ ಸೌಲಭ್ಯ ಕಲ್ಪಿಸಲು ಕೇಂದ್ರ ಸರ್ಕಾರ ವಿಶೇಷ ವ್ಯವಸ್ಥೆ ಮಾಡಿದೆ. ಯಾತ್ರಿಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮೂಲಕ ಫಾರೆಕ್ಸ್ ಕಾರ್ಡ್ ಸಹ ಕೊಡಲಾಗುವುದು.

2023ರ ಹಜ್ ಯಾತ್ರೆಗೆ ಹಲವಾರು ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಮುಂದಾಗಿದೆ. ನಗದು ರಹಿತ ಯಾತ್ರೆಗೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.

ಯಾತ್ರಿಗಳ ಆಯ್ಕೆಯಲ್ಲಿ ವಸ್ತುನಿಷ್ಠತೆ, ಪಾರದರ್ಶಕತೆ, ದಕ್ಷತೆ ಹಾಗೂ ಮಾನವ ಮಧ್ಯ ಪ್ರವೇಶ ಇರದಂತೆ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ ಎಂದು ಸಚಿವಾಲಯ ತಿಳಿಸಿದೆ.

# 14 ದೇಶಗಳಲ್ಲಿ ಭಾರತದ 28 ಭೂಗತರು

ನವದೆಹಲಿ, ಏ. 3 – ಹದಿನಾಲ್ಕು ವಿದೇಶಗಳಲ್ಲಿರುವ 28 ಭೂಗತರ ಪಟ್ಟಿಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಇವರಲ್ಲಿ ಒಂಭತ್ತು ಜನ ಕೆನಡಾ ಹಾಗೂ ಐವರು ಅಮೆರಿಕದಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಹತ್ಯೆ, ಹಣ ವಸೂಲಿ ಹಾಗೂ ಅಪಹರಣ ಸೇರಿದಂತೆ ಹಲವು ಪ್ರಕರಣಗಳನ್ನು ಭೂಗತರು ಎದುರಿಸುತ್ತಿದ್ದಾರೆ. ಇವರಲ್ಲಿ ಪಂಜಾಬಿ ಗಾಯಕ ಸಿಧು ಮೂಸೆವಾಲ ಹತ್ಯೆಯ ಹಿಂದಿರುವ ಲಾರೆನ್ಸ್ ಬಿಷ್ಣೋಯಿ ಸಹ ಸೇರಿದ್ದಾನೆ.

ಇನ್ನೋರ್ವ ಭೂಗತ ಅನಮೋಲ್ ಬಿಷ್ಣೋಯಿ ಎಂಬಾತ ಅಮೆರಿಕದಲ್ಲಿ ಆಶ್ರಯ ಪಡೆದಿದ್ದಾನೆ. ಆತನ ವಿರುದ್ಧ ಉಗ್ರವಾದಿ ದಾಳಿ ಹಾಗೂ ಚಿತ್ರರಂಗದ ಪ್ರಮುಖರ ಹತ್ಯೆಗೆ ಸಂಚು ನಡೆಸಿದ ಆರೋಪ ಇದೆ.

ಯು.ಎ.ಇ., ಯುರೋಪ್, ಅಜರ್ಬೈಜಾನ್, ಮಲೇಷಿಯ, ಪಾಕಿಸ್ತಾನ ಸೇರಿದಂತೆ ವಿವಿಧ ದೇಶಗಳಲ್ಲಿ ಭೂಗತರು ಆಶ್ರಯ ಪಡೆದಿದ್ದಾರೆ.

# ಬಾಪೂಜಿ ಕೋ-ಆಪ್. ಬ್ಯಾಂಕ್‌ಗೆ ರೂ. 14.45 ಕೋಟಿ ಲಾಭ



## ಎಸ್ಸೆಸ್, ಎಸ್ಸೆಸ್ಸೆಂ ಹರ್ಷ

ದಾವಣಗೆರೆ, ಏ.3- ನಗರದ ಪ್ರತಿಷ್ಠಿತ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಕಳೆದ ಮಾರ್ಚ್ 31ಕ್ಕೆ ಮುಕ್ತಾಯಗೊಂಡ 2022-23 ನೇ ಸಾಲಿನ ಹಣಕಾಸು ವರ್ಷದಲ್ಲಿ ರೂ.14.45 ಕೋಟಿ ಲಾಭ ಗಳಿಸಿದ್ದು ಒಟ್ಟು ಲಾಭದಲ್ಲಿ ಆದಾಯ ತೆರಿಗೆ ಮತ್ತು ಇತರೆ ಅವಕಾಶಗಳನ್ನು ಕಲ್ಪಿಸಿದ ನಂತರ ರೂ.8.75 ಕೋಟಿ ನಿವ್ವಳ ಲಾಭ ಗಳಿಸಿದ್ದು ಬ್ಯಾಂಕು ಕಳೆದ ಸಾಲಿಗಿಂತ ಈ ವರ್ಷ ರೂ.1.37 ಕೋಟಿ ಹೆಚ್ಚಿನ ಲಾಭ ಗಳಿಸಿದೆ ಎಂದು ಬ್ಯಾಂಕಿನ ಅಧ್ಯಕ್ಷರು ಹಾಗೂ ಶಾಸಕ ಶಾಮನೂರು ಶಿವಶಂಕರಪ್ಪ, ಉಪಾಧ್ಯಕ್ಷರು ಹಾಗೂ ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ನಿರ್ದೇಶಕ ಮಂಡಲಿಯ ಸದಸ್ಯರುಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿರುವ ಬಾಪೂಜಿ ಬ್ಯಾಂಕ್ ರೂ.14.45 ಕೋಟಿ ಲಾಭ ಗಳಿಸುವ ಮೂಲಕ ಜಿಲ್ಲೆಯಲ್ಲಿನ ಸಹಕಾರಿ ಬ್ಯಾಂಕುಗಳಲ್ಲೇ ಪ್ರಥಮ ಸ್ಥಾನದಲ್ಲಿ ಅಬಾಧಿತವಾಗಿ ಮುಂದುವರೆದಿದೆ. 10596 ಸದಸ್ಯರುಗಳನ್ನು ಹೊಂದಿರುವ ಬ್ಯಾಂಕಿನ ಷೇರು ಬಂಡವಾಳ ರೂ.16.05 ಕೋಟಿಗೇರಿದೆ. ರೂ.126.58 ಕೋಟಿ ನಿಧಿಗಳು, ರೂ.478.09 ಕೋಟಿ ವಿವಿಧ ಲಾಭದಾಯಕ ಭದ್ರತೆಗಳಲ್ಲಿ ತೊಡಗಣೆ ಮಾಡಿದೆ, ದುಡಿಯುವ ಬಂಡವಾಳ ರೂ.944.87 ಕೋಟಿ, ಠೇವಣಿ ರೂ.793.07 ಕೋಟಿ ಸಂಗ್ರಹ ವಾಗಿದ್ದು, ರೂ.402.11 ಕೋಟಿ ಸಾಲ ಸೌಲಭ್ಯವನ್ನು (ಭಾರತೀಯ ರಿಜರ್ವ್ ಬ್ಯಾಂಕಿನ ಆದೇಶದಂತೆ ಆದ್ಯತಾರಂಗ ಮತ್ತು ದುರ್ಬಲ ವರ್ಗದವರ ನ್ನೊಳಗೊಂಡು) ಸದಸ್ಯರಿಗೆ ಕಲ್ಪಿಸ ಲಾಗಿದೆ. ಬ್ಯಾಂಕಿನ ಠೇವಣಿದಾರರ ಸುರಕ್ಷತೆಯ ದೃಷ್ಟಿಯಿಂದ ರೂಪಾಯಿ ಐದು ಲಕ್ಷದವರೆಗಿನ ಠೇವಣಿಗಳಿಗೆ ಡಿಪಾಜಿಟ್ ಇನ್ಸೂರೆನ್ಸ್ ಸ್ಕೀಮ್ ಚಾಲ್ತಿಯಲ್ಲಿರುತ್ತದೆ ಮತ್ತು ಕರ್ನಾಟಕ ರಾಜ್ಯ ಸರ್ಕಾರದ 'ಯಶಸ್ವಿನಿ ನಗರ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ'ಯನ್ನು ಕೂಡ ಬ್ಯಾಂಕು ಅಳವಡಿಸಿ ಕೊಂಡಿದೆ. ಬ್ಯಾಂಕಿನ ಆಡಳಿತ ಮಂಡಲಿಯ ಸತತ ಪ್ರಯತ್ನದಿಂದಾಗಿ ಬ್ಯಾಂಕಿನ ಕಾರ್ಯಕ್ಷೇತ್ರ (2ನೇ ಪುಟಕ್ಕೆ)

### ಪಂಚಮಸಾಲಿ ಸಮುದಾಯದ ನಾಯಕರಲ್ಲಿ ಮೀಸಲಾತಿಗೆ ಪರ - ವಿರೋಧ ನಿಲುವು

# ಕೂಡಲಸಂಗಮ ಸ್ವಾಮೀಜಿಗೆ ಬೆದರಿಕೆ : ಭದ್ರತೆಗೆ ಸೂಚನೆ



ಬೆಂಗಳೂರು, ಏ. 3 - ರಾಜ್ಯದಲ್ಲಿ ಪಂಚಮಸಾಲಿ ಸಮಾಜಕ್ಕೆ ರಾಜ್ಯ ಸರ್ಕಾರ ಪ್ರಕಟಿಸಿರುವ 2ಡಿ ಮೀಸಲಾತಿಗೆ ಸಮುದಾಯದ ನಾಯಕರಲ್ಲಿ ಪರ ಹಾಗೂ ವಿರೋಧದ ನಿಲುವುಗಳು ಕಂಡು ಬಂದಿವೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಯಾವುದೇ ಕಾರಣಕ್ಕೂ ಸರ್ಕಾರದ ಆದೇಶವನ್ನು ಒಪ್ಪುವುದಿಲ್ಲ. ಚುನಾವಣೆ ಸಂದರ್ಭದಲ್ಲಿ ಮೂಗಿಗೆ ತುಪ್ಪ ಸವರುವ ಕೆಲಸ ಮಾಡಿದೆ. ಇದನ್ನು ನಾವೆಲ್ಲರೂ ಖಂಡಿಸಬೇಕು. ಮುಂದೆ ಸರ್ಕಾರ ಬದಲಾದಾಗ ನಮಗೆ ನ್ಯಾಯ ಸಿಗುತ್ತದೆ ಎಂದು ಹೇಳಿದರು. ಮಾಜಿ ಶಾಸಕರಾದ ವಿನಯ ಕುಲಕರ್ಣಿ, ಎ.ಬಿ. ಪಾಟೀಲ ಸಹ ಸರ್ಕಾರ ಪ್ರಕಟಿಸಿರುವ ಮೀಸಲಾತಿಗೆ ಆಕ್ಷೇಪಿಸಿದ್ದಾರೆ.

ನಾವು 2ಎ ಅಡಿಯಲ್ಲಿ ಶೇ.15ರ ಮೀಸಲಾತಿ ಕೇಳಿದ್ದೆವು. ಈ ಮೀಸಲಾತಿಗಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದ್ದರು. ಆದರೆ, ಕೇವಲ ಶೇ.2ರಷ್ಟು ಮೀಸಲಾತಿ ಹೆಚ್ಚಿಸಲಾಗಿದೆ ಎಂದು ಆಕ್ಷೇಪಿಸಿದರು.

ಈ ಮಧ್ಯೆ ಪತ್ರಕರ್ತರೊಂದಿಗೆ ಮಾತನಾಡಿದ ಸಚಿವ ಸಿ.ಸಿ. ಪಾಟೀಲ್ ಅವರು ಮಾತನಾಡಿ, ಬಿಜೆಪಿ ಸರ್ಕಾರ ಕೊಟ್ಟಿರುವ ಮೀಸಲಾತಿಯನ್ನು ನೀವು ಯಾಕೆ ಒಪ್ಪಿಕೊಂಡಿದ್ದೀರಿ ಎಂದು ಕಾಂಗ್ರೆಸ್ ನಾಯಕರು ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯ ಮೃ ತ್ಯುಂ ಜ ಯ (3ನೇ ಪುಟಕ್ಕೆ)

## ಮೇಣದ ಬತ್ತಿ ಬೆಳಗಿಸಿ, ಮತದಾನ ಜಾಗೃತಿ ಜಾಥಾ




ಕೊಟ್ಟೂರು, ಏ. 3 - ರಾಜ್ಯ ವಿಧಾನ ಸಭೆಗೆ ನಡೆಸಲಿರುವ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಪಟ್ಟಣದಲ್ಲಿ ಭಾನುವಾರ ಸಂಜೆ ಮೇಣದ ಬತ್ತಿ ಬೆಳಗಿಸಿ, ಬಸ್ ನಿಲ್ದಾಣದಿಂದ ಉಜ್ಜಿನಿ ವೃತ್ತದವರೆಗೆ ಜಾಥಾ ನಡೆಸಲಾಯಿತು.

ಜಾಥಾಕ್ಕೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ನಸುರುಲ್ಲಾ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಜಾಥಾದಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲರೂ ಮತದಾನ ಮಾಡಬೇಕು. ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೊಳಿಸಿಕೊಳ್ಳಬೇಕು. ಮತದಾನ ಮಾಡುವುದು ಪ್ರತಿಯೊಬ್ಬ ಮತದಾರನ ಕರ್ತವ್ಯವಾಗಿದೆ. ಮತದಾನದ ದಿನದಂದು ತಪ್ಪದೇ ಮತ ಚಲಾಯಿಸಬೇಕು. ಯಾವುದೇ ಕಾರಣಕ್ಕೂ ಮತದಾನದಿಂದ ದೂರ ಉಳಿಯಬಾರದು ಎಂದು ಹೇಳಿದರು.

ಮೇಣದ ಬತ್ತಿ ಜಾಥಾದಲ್ಲಿ ಮತದಾನದ ಮಹತ್ವ ಕುರಿತು ಘೋಷಣೆಗಳನ್ನು ಕೂಗುತ್ತಾ ಜನರಲ್ಲಿ ಜಾಗೃತಿ ಮೂಡಿಸಲಾಯಿತು. ತಾಲ್ಲೂಕು ಆಡಳಿತ ಕಚೇರಿಯ ಸಿಬ್ಬಂದಿ, ಪಟ್ಟಣ ಪಂಚಾಯಿತಿಯ ಸಿಬ್ಬಂದಿ, ಪೌರಕಾರ್ಮಿಕರು, ತಾಲ್ಲೂಕು ಪಂಚಾಯಿತಿ ಸಿಬ್ಬಂದಿ ಪಾಲ್ಗೊಂಡಿದ್ದರು. ತಾಲ್ಲೂಕು ಸ್ವೀಪ್ ಸಮಿತಿ ನೋಡಲ್ ಅಧಿಕಾರಿ ಮೈದೂರು ಶಶಿಧರ್ ಮತ್ತಿತರರಿದ್ದರು.

## ಸಮಾಜದ ಅಭಿವೃದ್ಧಿಗೆ ಶ್ರಮಿಸಿದ ಪುಣ್ಯಾನಂದ ಪುರಿ ಶ್ರೀ

**ಹರಪನಹಳ್ಳಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚಂಗೆಪ್ಪ ಮೆಚ್ಚುಗೆ**



ಹರಪನಹಳ್ಳಿ, ಏ. 3- ರಾಜ್ಯದ ವಾಲ್ಮೀಕಿ ನಾಯಕ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದವರು ಮಹಾ ತಪಸ್ವಿ ಲಿಂ. ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮೀಜಿಯವರು ಎಂದು ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ಅಧ್ಯಕ್ಷ ಕೋರಿಶೆಟ್ಟಿ ಉಚ್ಚಂಗೆಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ವಾಲ್ಮೀಕಿ ನಗರದಲ್ಲಿ ತಾಲ್ಲೂಕು ವಾಲ್ಮೀಕಿ ನಾಯಕ ಸಮಾಜದ ವತಿಯಿಂದ ಆಯೋಜಿಸಿದ್ದ ರಾಜನಹಳ್ಳಿಯ ವಾಲ್ಮೀಕಿ ಗುರು ಪೀಠದ ಪ್ರಥಮ ಪೀಠಾಧಿಪತಿಯಾಗಿದ್ದ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮೀಜಿಯವರ 16ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಾಲ್ಮೀಕಿ ನಾಯಕ ಸಮಾಜ ಅರಿವಿನ ದಾರಿ ಕಾಣದೇ ಪರಿತಪಿಸುತ್ತಿರುವಾಗ ದಾರಿ ತೋರುವ ಪುಣ್ಯ ಪುರುಷರಾಗಿ ಶ್ರೀ ಪುಣ್ಯಾನಂದ ಪುರಿ ಮಹಾಸ್ವಾಮೀಜಿಯವರು ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಥಮ ಪೀಠಾಧಿಪತಿಯಾಗಿ ಶ್ರೀ ಕ್ಷೇತ್ರವು ಕೆಲವೇ ವರ್ಷಗಳಲ್ಲಿ ಸಮಾಜದ ಜನ ಮಾನಸದಲ್ಲಿ ವಿರಾಜಿಸುವಂತೆ ಮಾಡಿದರು. ಸಮಾಜದಲ್ಲಿ ಬಡವ-ಬಲ್ಲಿದ, ಮೇಲು-ಕೀಳು ಎಂಬ ಭಾವನೆಗೆ ಅವಕಾಶ ಕೊಡದೆ ಸಮಾಜದ ಎಲ್ಲರನ್ನೂ ಸಮಾನತೆಯಿಂದ ಕಾಣುತ್ತಾ, ಮಾನವೀಯ ಮೌಲ್ಯಗಳನ್ನು ಬಿತ್ತರಿಸುತ್ತಾ, ಭೋಗಾದಿಗಳನ್ನು ತ್ಯಜಿಸಿ, ಸಾಮಾನ್ಯ ಜನತೆಯ ಹಾಗೂ ಸಮಾಜದ ಹಿತಕ್ಕಾಗಿ ಸರ್ವಾಂಗೀಣ ಅಭಿವೃದ್ಧಿಗಾಗಿ ಹಗಲಿರುಳೆನ್ನದೆ ಅವಿರತ ಪ್ರಯತ್ನ ಮಾಡಿದರು ಎಂದು ಹೇಳಿದರು.

ಮುಖಂಡರಾದ ಮಂಡಕ್ಕಿ ಸುರೇಶ ಹಾಗೂ ಅಲಮರಸಿಕೇರಿ ಟಿ.ಬಿ. ರಾಜು ಮಾತನಾಡಿ, ರಾಜ್ಯದ 4ನೇ ಅತಿ ದೊಡ್ಡ ಸಮಾಜದ ವಾಲ್ಮೀಕಿ ನಾಯಕ ಸಮಾಜವನ್ನು ಮುಖ್ಯ ವಾಹಿನಿಗೆ ತರಲು ರಾಜ್ಯ ಪ್ರವಾಸ ಮಾಡಿ ಸಮಾಜವನ್ನು ಜಾಗೃತಿ ಮಾಡಲು ಶ್ರಮಿಸಿದ್ದರು. ಸಮಾಜದಲ್ಲಿರುವ ದುರ್ಬಲರ ಧ್ವನಿಯಾಗಿ ಸಮಾನತೆಯ ಸಮಾಜ ನಿರ್ಮಾಣಕ್ಕೆ ಸಂಕಲ್ಪ ತೊಟ್ಟರು. ಸಮಾಜದಲ್ಲಿ ಎಲ್ಲಿಯೇ ಅನ್ಯಾಯವಾದರೂ ತಕ್ಷಣ ಪ್ರತಿಕ್ರಿಯಿಸಿ ನ್ಯಾಯಪರ ಹೋರಾಟಕ್ಕೆ ಸಿದ್ಧರಾಗುತ್ತಿದ್ದರು ಎಂದರು.

ಯುವ ಮುಖಂಡ ರಾಜು ತಳವಾರ ಮಾತನಾಡಿ, ಪುಣ್ಯಾನಂದ ಶ್ರೀಗಳು ಬಹಿರಂಗದಲ್ಲಿ ಸೌಮ್ಯ ಪರ್ವತವಾಗಿದ್ದರು. ಅವರ ಆಲೋಚನೆಗಳು, ಸಾಮೂಹಿಕ ಕಾರ್ಯ ಯೋಜನೆಗಳು, ಕ್ರಿಯಾ ಯೋಜನೆಗಳು ಸಮಾಜ ನಿಷ್ಠವಾಗಿದ್ದವು. ಇಂತಹ ಮೇರು ವ್ಯಕ್ತಿತ್ವ ಹೊಂದಿದ್ದ ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿಯವರು ಕಾಣದ ಕೈಗಳ ಕಪಟಕ್ಕೆ ಸಿಲುಕಿ ರೈಲ್ವೆ ಅಪಘಾತದಲ್ಲಿ ಕೊನೆಯುಸಿರೆಳೆದರು ಎಂದು ವಿಷಾದ ವ್ಯಕ್ತಪಡಿಸಿದರು.

ಈ ವೇಳೆ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಚಂದ್ರಪ್ಪ ತಳವಾರ್, ಈಶಾಪುರ ಗ್ರಾಮ ಪಂಚಾಯ್ತಿ ಸದಸ್ಯ ಪೂಜಾರ್ ಮಂಜುನಾಥ್, ನಿವೃತ್ತ ಮುಖ್ಯ ಶಿಕ್ಷಕ ಆನಂದಪ್ಪ, ಸಂಘಟನಾ ಕಾರ್ಯದರ್ಶಿ ಜಿ.ಕೆ. ಬಸವರಾಜ, ತಾಲ್ಲೂಕು ವಾಲ್ಮೀಕಿ ನಾಯಕ ಮಹಿಳಾ ಘಟಕದ ಗೌರವ ಅಧ್ಯಕ್ಷೆ ಟಿ. ಪದ್ಮಾವತಿ, ಕೆ. ದ್ರಾಕ್ಷಾಯಿಣಮ್ಮ, ಮಂಜುಳಾ, ಪವಿತ್ರಾ, ರೇಖಾ ಮಂಜಪ್ಪ, ಮ್ಯಾಕಿ ಶಿವರಾಜ, ಮ್ಯಾಕಿ ಬಸವರಾಜ, ವಕೀಲರಾದ ಜಿಟ್ಟಿನಕಟ್ಟಿ ಮಂಜುನಾಥ, ಕವಸರ ರಾಜಪ್ಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಜ್ಞಾನ ಸದ್ಬಳಕೆಯಾದರೆ ಸುಜ್ಞಾನಿಗಳಾಗುತ್ತಾರೆ

**ರಾಣೇಬೆನ್ನೂರು: ವಿಶ್ವಧರ್ಮ ಪ್ರವಚನದಲ್ಲಿ ನಿಜಗುಣಾನಂದ ಶ್ರೀಗಳು**



ರಾಣೇಬೆನ್ನೂರು, ಏ, 3- ಪ್ರತಿಯೊಬ್ಬರಲ್ಲಿಯೂ ಜ್ಞಾನವಿದೆ. ಅದನ್ನು ವಿವೇಕ ದಿಂದ ಬಳಕೆ ಮಾಡಿಕೊಂಡರೆ ಸುಜ್ಞಾನಿಗಳಾಗುತ್ತಾರೆ ಎಂದು ರಾಣೇಬೆನ್ನೂರಿನಲ್ಲಿ ನಡೆಯುತ್ತಿರುವ ವಿಶ್ವಧರ್ಮ ಪ್ರವಚನದಲ್ಲಿ ನಿಜಗುಣಾನಂದ ಶ್ರೀಗಳು ನುಡಿದರು.

ಲಕ್ಷ್ಮಿ ಚಂಚಲೆ. ಅವಳು ಯಾರ ಬಳಿಯೂ ನಿಲ್ಲಲಾರಳು. ಅದಕ್ಕೆ ಅವಳನ್ನು ಹೂವಿನ ಮೇಲೆ ಕುಳ್ಳಿರಿಸಿದ್ದಾರೆ. ಜ್ಞಾನ ಅಂದರೆ ಸರಸ್ವತಿ, ಅವಳನ್ನು ಯಾರೂ ಅಪಹರಿಸಲು ಸಾಧ್ಯವಿಲ್ಲ. ಹೀಗಾಗಿ ಅವಳನ್ನು ಸ್ಥಿರವಾಗಿರಿಸಲಾಗಿದೆ. ಅಪಾರ ಹಣವಿದ್ದು, ಜ್ಞಾನವಿಲ್ಲದಿದ್ದರೆ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಲಾರದು. ಹಣವಿಲ್ಲದ ಜ್ಞಾನಿಗಳು ಬುದ್ಧಿವಂತಿಕೆಯಿಂದ ಉತ್ತಮ ಬದುಕು ಕಟ್ಟಿಕೊಳ್ಳಬಹುದು. ಬದುಕಿಗೆ ಹಣವೇ ಪ್ರಧಾನವಲ್ಲ ಎಂದು ಶ್ರೀಗಳು ಹೇಳಿದರು.

ಸತಿ-ಪತಿಗಳೊಂದಾದ ಭಕ್ತಿ ಶಿವನಿಗೆ ಇಷ್ಟ. ಒಂದಾಗದ ಭಕ್ತಿ ಅಮೃತದೊಳು ವಿಷ ಬೆರೆಸಿದಂತೆ ರಾಮನಾಥ ಎಂದ ಹೇಳಿದ ಬಸವ ಪೂರ್ವದ ದೇವರ ದಾಸಿಮಯ್ಯ ಅವರ ಬದುಕಿನ ಚಿತ್ರಣವನ್ನು ಸಾಂದರ್ಭಿಕವಾಗಿ ಪ್ರಸ್ತಾಪಿಸಿ, ಆನೆ, ಆಡಂಬರದ ಬದುಕನ್ನು ತಿರಸ್ಕರಿಸಿ, ಸಾಂಗತ್ಯ ಬಯಸಿದ್ದನ್ನು ನಿಜಗುಣಾನಂದ ಶ್ರೀಗಳು ವಿವರಿಸಿದರು. ಸಮಯದ ಮಹತ್ವವನ್ನು ಅರಿತಿದ್ದ ಶರಣರು ಬದುಕಿನಲ್ಲಿ ವೇಳಾಪಟ್ಟಿ ಅಳವಡಿಸಿಕೊಂಡಿದ್ದರು.

ಪ್ರತಿಯೊಬ್ಬರು ಸಮಯದ ಅರಿವು ಇಟ್ಟುಕೊಳ್ಳಬೇಕು. ಸಮಯ ಹಾಳು ಮಾಡದೆ ಮನದ ಕೇಡು ಕಳೆದುಕೊಂಡು ಮಹಾತ್ಮರ, ಶರಣರ ಬದುಕನ್ನು ಮಾದರಿಯಾಗಿಸಿ ಕೊಳ್ಳುವಂತೆ ನಿಜಗುಣಾನಂದ ಶ್ರೀ ತಿಳುವಳಿಕೆ ನೀಡಿದರು.

## ರಾಣೇಬೆನ್ನೂರಿನಲ್ಲಿ ಕಾಂಗ್ರೆಸ್ ಸಭೆ

ರಾಣೇಬೆನ್ನೂರು, ಏ. 3 - ವಿಧಾನಸಭೆ ಚುನಾವಣೆಗೆ ಸಂಬಂಧಿಸಿದಂತೆ ಸಲಹೆ, ಸೂಚನೆ ಕೊಡಲು ಇದೇ ದಿನಾಂಕ 6 ರಂದು ಬೆಳಿಗ್ಗೆ ವಿನಾಯಕ ನಗರದ ಪಕ್ಷದ ಕಛೇರಿಯಲ್ಲಿ ನಡೆಯುವ ಸಭೆಗೆ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು, ಮುಖಂಡರು, ಅಭಿಮಾನಿಗಳು ಹಾಗೂ ಹಿತೈಷಿಗಳು ಆಗಮಿಸಬೇಕೆಂದು ಅಧ್ಯಕ್ಷರುಗಳಾದ ಮಂಜನಗೌಡ ಪಾಟೀಲ ಹಾಗೂ ಶೇರು ಕಾಬೂಲಿ ಮನವಿ ಮಾಡಿದ್ದಾರೆ.

## ಹಾಲೇಕಲ್ಲು: ಗೋಣಿ ಬಸವೇಶ್ವರ ಸ್ವಾಮಿಯ ವಿಜೃಂಭಣೆಯ ರಥೋತ್ಸವ



ಜಗಳೂರು, ಏ. 3- ತಾಲ್ಲೂಕಿನ ಹಾಲೇಕಲ್ಲು ಗ್ರಾಮದಲ್ಲಿ ಶ್ರೀ ಗೋಣಿ ಬಸವೇಶ್ವರ ಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು.

ರಥದ ಬೀದಿಯ ಆವರಣದಲ್ಲಿ ರಥಕ್ಕೆ ಬಾವುಟ, ಹಸಿರು ತೋರಣ, ಬಗೆ ಬಗೆಯ ಹೂಗಳಿಂದ ಸಿಂಗಾರ ಮಾಡಲಾಗಿತ್ತು.

ಶ್ರೀ ಗೋಣಿ ಬಸವೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಅಲಂಕೃತಗೊಳಿಸಿ, ಪಲ್ಲಕ್ಕಿಯಲ್ಲಿ ಜಯಘೋಷಗಳೊಂದಿಗೆ ಭಕ್ತರು ರಥದ ಸುತ್ತಲು ಪ್ರದಕ್ಷಿಣೆ ಮಾಡಿ ರಥಕ್ಕೆ ಸ್ವಾಮಿಯನ್ನು ಕರೆ ತರಲಾಯಿತು.

ನಂತರ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ರಥವನ್ನು ಎಳೆಯಲಾಯಿತು. ಭಕ್ತರು ರಥಕ್ಕೆ ಹೂವು-ಬಾಳೆಹಣ್ಣು ಸಮರ್ಪಿಸಿದರು.

## ಜನಾಂಗ ಹುಟ್ಟಿದ ಮೇಲೆ ಭಾಷೆ ಹುಟ್ಟಿದೆ, ಭಾಷೆ ಹುಟ್ಟಿದ ಮೇಲೆ ಶಬ್ದಗಳು ಹುಟ್ಟಿವೆ

**ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಶ್ರೀ ಪ್ರಭು ತೋಂಟದಾರ್ಯ ಸ್ವಾಮೀಜಿ**


ರಾಣಿಬೆನ್ನೂರು, ಏ. 3 - ಜನಾಂಗ ಹುಟ್ಟಿದ ಮೇಲೆ ಭಾಷೆ ಹುಟ್ಟಿದೆ. ಭಾಷೆಯು ಮನುಷ್ಯನ ಭಾವನೆಗಳಿಂದ ಉತ್ಪತ್ತಿಯಾದ ಶಬ್ದಗಳು. ಭಾಷೆ ಹುಟ್ಟಿದ ಮೇಲೆ ಶಬ್ದಗಳು ಹುಟ್ಟಿವೆ. ದಿವ್ಯ ಎಂಬ ಶಬ್ದದ ಧಾತುವಿನಿಂದ ದೇವ ಶಬ್ದ ಹುಟ್ಟಿದೆ ಎಂದು ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮೀಜಿ ನುಡಿದರು.

ಇಲ್ಲಿನ ನಗರಸಭೆ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿರುವ ವಿಶ್ವಧರ್ಮ ಪ್ರವಚನದಲ್ಲಿ ಭಾನುವಾರ ರಾತ್ರಿ ಆಶೀರ್ವಚನ ನೀಡಿದರು.

ದಿವ್ಯ ಎಂಬ ಶಬ್ದದ ಧಾತುವಿನಿಂದ ದೇವ ಶಬ್ದ ಉದ್ಘಾಟನೆಯಾಗಿದೆ. ಮನುಷ್ಯನ ಪ್ರತಿಯೊಂದು ಹೆಸರಿನಲ್ಲಿಯೂ ಪರಮಾತ್ಮನ ಶಬ್ದವಿದೆ. ಪ್ರತಿಯೊಂದು ಶಬ್ದದಲ್ಲಿ ಓಂಕಾರವಿದೆ. ದೇವರು ಯಾರಿಗೂ ಭೇದ ಭಾವ ಮಾಡುವ ಪ್ರಮೇಯವೇ ಇಲ್ಲ. ದೇವರ ಬಲದಿಂದ ಯಾರೂ ಶ್ರೀಮಂತ ಆಗುವುದಿಲ್ಲ. ಸ್ವಂತ ಶಕ್ತಿ ಮತ್ತು ಪ್ರಯತ್ನದಿಂದ ಶ್ರೀಮಂತರಾಗಲು ಸಾಧ್ಯ. ಪ್ರತಿಯೊಂದು ಸಮಸ್ಯೆಗೂ ಉತ್ತರ ಇದೆ. ಮನುಷ್ಯ ಮಾಡಿಕೊಂಡ ಸ್ವಯಂಕೃತ ಅಪರಾಧಗಳಿಗೆ ಉತ್ತರ ಸಿಗಲ್ಲ. ದೇವರ ಅದ್ಭುತ ಕೊಡುಗೆ ಮನುಷ್ಯ. ಅವನು ಪ್ರತಿಯೊಬ್ಬರಿಗೂ ಬದುಕಲು ಅವಕಾಶ ನೀಡಿದ್ದಾನೆ. ಮನುಷ್ಯ ಸಹನೆ, ಸಂಗಮದಿಂದ ಹಾಗೂ ಸದಾ ಎಚ್ಚರದಿಂದ ಇರಬೇಕು. ಹಿಟ್ಲರ್ ಸಸ್ಯಾಹಾರಿಯಾಗಿದ್ದರೂ ಭಾವನೆಯಿಂದ ಕ್ರೂರಿಯಾಗಿದ್ದನು. ಆದರೆ ಮದರ್ ಥೇರಸಾ ಮಾಂಸಾಹಾರಿಯಾಗಿದ್ದರೂ ಕರುಣಾಮಯಿಯಾಗಿದ್ದು, ಕುಷ್ಠರೋಗಿಗಳ ಸೇವೆ ಮಾಡಿದರು. ಮನುಷ್ಯ ಮಂದಿ ತಲೆಗೆ ಕಸ ಹಾಕುವ ಕೆಲಸ ಮಾಡದೇ, ಬದುಕಿಗೆ ಬೆಳಕನ್ನು ಕೊಡಬೇಕು. ಮಕ್ಕಳಾಗುವುದು ದೇವರ ಕೃಪೆಯಾಗಿರದೆ ಪ್ರಕೃತಿಯ ಸಹಜ ಪ್ರಕ್ರಿಯೆ.

ಭಾರತ ದೇಶದ ಗುರು ಪರಂಪರೆ ವಿಶ್ವದಲ್ಲೇ ಅತ್ಯಂತ ಶ್ರೇಷ್ಠವಾದುದು. ದೇಶದಲ್ಲಿಯೇ ಕರ್ನಾಟಕ ಶ್ರೇಷ್ಠ ರಾಜ್ಯ. ನಮ್ಮಲ್ಲಿ ಮಠಗಳ ಕೊಡುಗೆ ಅಪಾರವಾಗಿದ್ದು ಇಲ್ಲಿನ ಮಠಾಧಿಪತಿಗಳು ಭಕ್ತರನ್ನು ದೇವರನ್ನಾಗಿ ನೋಡಿದರು. ಕೆಲವು ದಶಕಗಳ ಹಿಂದೆ ಮಕ್ಕಳಿಗೆ ಮಠಗಳಲ್ಲಿ ಪ್ರಸಾದ ನೀಡಿ ಶಿಕ್ಷಣ ಕೊಡಿಸಿದರು. ಪಾಟೀಲ ಪುಟ್ಟಪ್ಪ, ಕವಿ ಶಾಂತರಸರು ಮುಂತಾದ ಮಹನೀಯರುಗಳ ಶ್ರೇಯೋಭಿವೃದ್ಧಿಯಲ್ಲಿ ಮಠಗಳ ಪಾತ್ರ ಮಹತ್ವದ್ದಾಗಿದೆ.

### ಸದ್ಗುರು ಮಹಾವೀರ



ಜೈನ ಧರ್ಮವ ಸ್ಥಾಪಿಸಿದ
ತೀರ್ಥಂಕರ ಗುರು ಮಹಾವೀರನೇ,
ಸಹನೆ, ಸತ್ಯ, ಅಹಿಂಸಾ ತತ್ವ
ಪ್ರತಿಪಾದಿಸಿದ ಶಾಂತಿದೂತನೆ.

ಪಂಚಶೀಲ ತತ್ವಗಳನು ಜಗಕೆ
ಮೊದಲು ಪರಿಚಯಿಸಿದೆ,
ತ್ಯಾಗ ಪ್ರಧಾನ ಜೈನ ಧರ್ಮದಿ
ತ್ರಿರತ್ನಗಳ ಕೊಡುಗೆ ನೀಡಿದೆ.

ಜೈನ ಧರ್ಮ ವಿಶ್ವಧರ್ಮವಾಗಿ
ಎತ್ತಿ ಹಿಡಿದ ಶಕಪುರುಷನೇ,
ತಾತ್ವಿಕ ಚಿಂತನೆಗಳ ಪರಿಚಯಿಸಿದ
ಧರ್ಮ ಪ್ರವರ್ತಕನೇ.

ಶ್ರದ್ಧಾಸಂಪನ್ನ, ಸಾಧನಪ್ರಿಯ ಶಿಷ್ಯ
ಗಣಾಧರರಿಗೆ ದಾರಿ ತೋರಿಹೆ,
ತ್ಯಾಗಮೂಲದ ಪರಂಪರಾಗತ
ಸಂಪ್ರದಾಯವ ರೂಢಿಸಿಹೆ.

- ಜೆ.ಎಲ್.ಲೀಲಾಮಹೇಶ್ವರ
ಅರಸೀಕೆರೆ.

## ಅನೇಕ ಬಿಜೆಪಿ ನಾಯಕರು ಕಾಂಗ್ರೆಸ್ ಸೇರುತ್ತಿದ್ದಾರೆ : ಡಿಕೆಶಿ

ಬೆಂಗಳೂರು, ಏ. 3 - ರಾಜ್ಯದ ಜನ ಕಾಂಗ್ರೆಸ್ ಪರ ಒಲವು ತೋರುತ್ತಿದ್ದು, ಕಾಂಗ್ರೆಸ್ ಪಕ್ಷ ಗೆಲುವಿನತ್ತ ಹೆಜ್ಜೆ ಹಾಕುತ್ತಿದೆ. ಈ ಕಾರಣಕ್ಕೆ ಅನೇಕ ನಾಯಕರು ಬಿಜೆಪಿ ತೊರೆದು ಕಾಂಗ್ರೆಸ್ ಸೇರುತ್ತಿದ್ದಾರೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದರು

ಗೋಪಾಲಕೃಷ್ಣ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಇಂದು ಕಾಂಗ್ರೆಸ್ ಸೇರಿದ್ದಾರೆ.

ಗೋಪಾಲಕೃಷ್ಣ ಅವರು ಯಾವುದೇ ಷರತ್ತು ಇಲ್ಲದೆ, ಪಕ್ಷದ ಕಾರ್ಯಕರ್ತನಾಗಿ ದುಡಿಯಲು ಸಿದ್ಧನಿದ್ದೇನೆ ಎಂದು ನಮ್ಮ ಬಳಿ ಇಚ್ಛೆ ವ್ಯಕ್ತಪಡಿಸಿದರು ಎಂದು ಹೇಳಿದರು.

ಜೆಡಿಎಸ್ ಶಾಸಕರಾದ ಶಿವಲಿಂಗೇಗೌಡರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, 9ರಂದು ತಮ್ಮ ಕ್ಷೇತ್ರದಲ್ಲಿ ಪಕ್ಷ ಸೇರಲು ಕೋರಿದ್ದಾರೆ. ಪಕ್ಷಕ್ಕೆ ಅರ್ಜಿ ಹಾಕುವಂತೆ ನಾವು ಸೂಚನೆ ನೀಡಿದ್ದೇವೆ ಎಂದರು.

## ನೊಳಂಬ ಸಮುದಾಯ ಭವನ ನಿರ್ಮಾಣಕ್ಕೆ 2.50 ಕೋಟಿ ಅನುದಾನ



**ಅಭಿನಂದನಾ ಸಮಾರಂಭದಲ್ಲಿ ಹೊನ್ನಾಳಿ ಶಾಸಕ ಎಂ.ಪಿ.ರೇಣುಕಾಚಾರ್ಯ**

ಹೊನ್ನಾಳಿ, ಏ. 3- ಕೊಟ್ಟ ಮಾತಿನಂತೆ ನೊಳಂಬ ವೀರಶೈವ ಲಿಂಗಾಯತ ಸಮಾಜದ ನೂತನ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ 2.50 ಕೋಟಿ ರೂ. ಅನುದಾನ ಬಿಡುಗಡೆ ಮಾಡಿಸಲಾಗಿದೆ ಎಂದು ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಸೋಮವಾರ ಎಚ್. ಕಡದಕಟ್ಟೆ ಗ್ರಾಮದಲ್ಲಿ ನೊಳಂಬ ವೀರಶೈವ ಲಿಂಗಾಯತ ಸಮಾಜದಿಂದ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನೊಳಂಬ ವೀರಶೈವ ಲಿಂಗಾಯತ ಸಮಾಜದ ನೂತನ ಸಮುದಾಯ ಭವನ ನಿರ್ಮಾಣಕ್ಕೆ ಪ್ರಾರಂಭಿಕ ಹಂತವಾಗಿ 2.50 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಇನ್ನು 2.50 ಕೋಟಿ ನಿಧಾನವಾಗಿ ಬಿಡುಗಡೆಯಾಗಲಿದೆ ಎಂದರು. ಈಗಾಗಲೇ ಕುಂಚಿಟಿಗ ಸಮುದಾಯ ಭವನಕ್ಕೆ 2.50 ಕೋಟಿ ರೂ ಸೇರಿದಂತೆ, ಹತ್ತೂರಿನ ತಿರುಮಲ ದೇವಸ್ಥಾನದ ಯಾತ್ರಿ ನಿವಾಸಕ್ಕೆ 75 ಲಕ್ಷ, ಎಚ್.ಗೋಪಗೊಂಡನಹಳ್ಳಿ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ 50 ಲಕ್ಷ ರೂ. ಸೇರಿದಂತೆ ಸಾಕಷ್ಟು ಅನುದಾನವನ್ನು ಕೊಟ್ಟ ಮಾತಿನಂತೆ ಹಾಕುವ ಮೂಲಕ ಅದನ್ನು ಉಳಿಸಿಕೊಂಡಿದ್ದೇನೆಂದರು.

518 ಕೋಟಿ ರೂ. ವೆಚ್ಚದಲ್ಲಿ 116 ಕೆರೆಗಳನ್ನು ತುಂಬಿಸುವ ಯೋಜನೆಯ ಕಾಮಗಾರಿ ಮುಕ್ತಾಯದ ಹಂತದಲ್ಲಿದ್ದು, ಸದ್ಯದಲ್ಲೇ ಕೆರೆಗಳಿಗೆ ನೀರು ತುಂಬಲಿದೆ ಎಂದರು. ಈ ಭಾಗದ ಹಳ್ಳಿಗಳಿಗೆ ಕೆರೆ ತುಂಬಿಸುವುದು ಮಾತ್ರವಲ್ಲ. ಶಾಶ್ವತ ನೀರಾವರಿ ಸೌಲಭ್ಯ ಮಾಡಬೇಕೆಂಬ ಕನಸು ನನ್ನದಾಗಿದ್ದು, ಈಗಾಗಲೇ 350 ಕೋಟಿ ರೂ. ಡಿಪಿಆರ್ ತಯಾರು ಮಾಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಈ ವೇಳೆ ನಿ.ಮಿ.ಚಂದ್ರಪ್ಪ, ನಂದಿ ಬ್ಯಾಂಕ್ ಅಧ್ಯಕ್ಷ ಮಲ್ಲೇಶಪ್ಪ, ನೊಳಂಬ ಸಂಘದ ಅಧ್ಯಕ್ಷ ಚನ್ನೇಶ್, ಶಾಂತರಾಜ್ ಪಾಟೀಲ್, ಬಗರ್ ಹುಕ್ಕುಂ ಅಧ್ಯಕ್ಷ ನಾಗರಾಜ್, ಶೇಖರಪ್ಪ ಹುಡೇದ್, ನಿವೃತ್ತ ಶಿಕ್ಷಕರಾದ ಜಯಪ್ಪ, ಮಾಜಿ ತಾ.ಪಂ. ಸದಸ್ಯ ಶಿವಾನಂದ್ ಸೇರಿದಂತೆ ಸಮಾಜದ ಮುಖಂಡರಿದ್ದರು.

## ಕಲಾವಿದ ಬೆಳಗಲ್ಲು ವೀರಣ್ಣ ನಿಧನಕ್ಕೆ ಕಲಾವಿದರ ಸಂಘದ ಸಂತಾಪ



ದಾವಣಗೆರೆ, ಏ. 3- ರಾಷ್ಟ್ರೀಯ ತೊಗಲುಬೊಂಬೆ ಕಲಾವಿದ, ಹಿರಿಯ ರಂಗ ಕಲಾವಿದ, ಯಕ್ಷಗಾನ, ಬಯಲಾಟ ಕಲಾವಿದ, ಹಿರಿಯ ರಂಗಚೇತನ ಬೆಳಗಲ್ಲು ವೀರಣ್ಣ ಅವರ ನಿಧನಕ್ಕೆ ನಗರದ ಕಲಾವಿದರ ಸಂಘದ ವತಿಯಿಂದ ಶ್ರದ್ಧಾಂಜಲಿ ಸಭೆಯನ್ನು ಸಂಘದ ಕಚೇರಿಯಲ್ಲಿ ನಡೆಸಲಾಯಿತು.

ಜಿಲ್ಲಾ ಕಲಾವಿದರ ಸಂಘದ ಅಧ್ಯಕ್ಷ ಎನ್.ಎಸ್. ರಾಜು ಅಧ್ಯಕ್ಷತೆ ವಹಿಸಿದ್ದರು. ಯಕ್ಷಗಾನ ಅಕಾಡೆಮಿ ರಿಜಿಸ್ಟ್ರಾರ್ ಎಸ್.ಹೆಚ್. ಶಿವರುದ್ರಪ್ಪ ಅವರೊಂದಿಗೆ ಇದ್ದ ವೀರಣ್ಣನವರ ಒಡನಾಟವನ್ನು ನೆನೆದು ಭಾವುಕರಾದರು.

ಮತ್ತೊಬ್ಬ ಹಿರಿಯ ರಂಗ ಕಲಾವಿದ ಹರಪನಹಳ್ಳಿ ಪರಶುರಾಮ್ ಅವರು, ಬೆಳಗಲ್ಲು ವೀರಣ್ಣ ಅವರ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಲ್ಲಿಸಿದ ರಂಗ ಸೇವೆಯನ್ನು ಸ್ಮರಿಸಿಕೊಂಡರು.

ಸಭೆಯಲ್ಲಿ ಎಂ.ಎಸ್. ಶಿವಣ್ಣ, ನೀರ್ಥಡಿ ಬಸವರಾಜ್, ಬಿ.ಇ. ತಿಪ್ಪೇಸ್ವಾಮಿ, ವಿಠೋಬ, ಪಿ.ಜಿ. ಪರಮೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದು ಬೆಳಗಲ್ಲು ವೀರಣ್ಣ ಅವರ ಕಲಾ ಸೇವೆಯನ್ನು ಸ್ಮರಿಸಿದರು.


### ಕೆ.ಎಂ. ಮಂಜುನಾಥ್ ನಿಧನ




ದಾವಣಗೆರೆ ಜಯನಗರ ಬಾಲಾಜಿ ಅಪಾರ್ಟ್‌ಮೆಂಟ್ ಹಿಂಭಾಗದ ವಾಸಿ
ಪೊಲೀಸ್ ಇಲಾಖೆಯ ನಿವೃತ್ತ ಎ.ಎಸ್.ಐ

**ಕೆ.ಎಂ. ಮಂಜುನಾಥ್ (ಮೀಸೆ ಮಂಜಣ್ಣ)**

ಅವರು ದಿನಾಂಕ 3.04.2023 ರ ಸೋಮವಾರ ಸಂಜೆ 6 ಕ್ಕೆ ನಿಧನರಾದರು. ಮೃತರಿಗೆ 72 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.04.2023 ರ ಮಂಗಳವಾರ ಮಧ್ಯಾಹ್ನ 2 ಕ್ಕೆ ನಗರದ ಆರ್.ಹೆಚ್ ಬೃಂದಾವನದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**
**ಮೊ : 78292 33790, 98862 80144, 84970 56499**

### ಹದಿನಾಲ್ಕನೇ ವರ್ಷದ ಪುಣ್ಯಸ್ಮರಣೆ



**ದಿ|| ಮಾಗಾನಹಳ್ಳಿ ಸಚ್ಚಿದಾನಂದಪ್ಪನವರು**
ಜನನ : 27.07.1936 ಮರಣ : 04.04.2009

ನೀವು ನಮ್ಮನ್ನಗಲಿ ಇಂದಿಗೆ ಹದಿನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ಶ್ರೀಮತಿ ಎಂ.ಎಸ್. ಶಾಂತಾ, ಮಗಳು, ಅಳಿಯ, ಸೊಸೆಯಂದಿರು,
ಮೊಮ್ಮಕ್ಕಳು, ಮರಿಮೊಮ್ಮಕ್ಕಳು : ತನ್ವಿ, ಅದ್ವಿಕ್, ಗೌರವ, ವಿದ್ಮಾ
ಅರ್ಥವ ಮಾಗಾನಹಳ್ಳಿ, ಕಶ್ವಿ, ವೈಗಾ ಅಂಗಡಿ

### ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



**ದಿ|| ಹಾಸಬಾವಿ ಕೊಟ್ರಬಸಪ್ಪನವರು**

*ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು. ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಹಾಗೂ ಸದಾ ನಿಮ್ಮ ಸ್ಮರಣೆಯಲ್ಲಿರುವ,*

ಪತ್ನಿ : ಶ್ರೀಮತಿ ಹೆಚ್.ಕೆ. ಮಂಗಳ,
ಅಕ್ಕಂದಿರು : ನಂದಾ ದೇವಣಗಾವಿ
ಮಕ್ಕಳು : ಸಂಜಯ್, ಬಕ್ಕೇಶ್, ಸೌಮ್ಯ,
ಮೊಮ್ಮಗಳು : ಧೃತಿ ಹಾಗೂ ಬಂಧು-ಮಿತ್ರರು.

### ಪ್ರೇಮಲೀಲಮ್ಮ ನಿಧನ



ದಾವಣಗೆರೆ ಸರಸ್ವತಿ ನಗರ 'ಎ' ಬ್ಲಾಕ್, ದುರ್ಗಾಂಬಿಕಾ ಹೈಸ್ಕೂಲ್ ಹತ್ತಿರ ಡೋರ್ ನಂ. 549/16ರ ವಾಸಿ ಬಸವರಾಜಪ್ಪ ಇವರ ಧರ್ಮಪತ್ನಿ ಪ್ರೇಮಲೀಲಮ್ಮ (76) ಇವರು ದಿನಾಂಕ : 3.4.2023ರ ಸೋಮವಾರ ರಾತ್ರಿ 8.20ಗಂಟೆಗೆ ನಿಧನರಾದರು. ಪತಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ದಿನಾಂಕ 4.04.2023ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮವಾದ ಭರಮಸಾಗರದ ಐ.ಬಿ ಹಿಂಭಾಗದ ಅಡಿಕೆ ತೋಟದಲ್ಲಿ ನೆರವೇರಲಿದೆ.


**ರಕ್ತ ದಾನ ಶ್ರೇಷ್ಠ ದಾನ**

## ಶಿವನಪಾದದಲ್ಲಿ ಇಂದಿನಿಂದ ಜಾತ್ರೋತ್ಸವ

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕಿನ ಶ್ರೀ ಶಿವನಪಾದ ಕ್ಷೇತ್ರದಲ್ಲಿ ಇಂದಿನಿಂದ ಇದೇ ದಿನಾಂಕ 6 ರವರೆಗೆ ಜಾತ್ರಾ ಮಹೋತ್ಸವ ಜರುಗಲಿದೆ.

ಇಂದು ಬೆಳಿಗ್ಗೆ 8 ಕ್ಕೆ ಶಿವನಪಾದ ಗ್ರಾಮದ ಮುಖಂಡ ಕೆ.ಜಿ. ಬಸವರಾಜಪ್ಪ ಶಿವ ಧ್ವಜಾರೋಹಣ ನೆರವೇರಿಸಲಿದ್ದಾರೆ. ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ಅಭಿಷೇಕ, ಕಂಕಣ ಧಾರಣೆ, ಕಳಸ ಪೂಜೆ, ಶಿವ ನಾಮಾವಳಿ, ಮಹಾಮಂಗಳಾರತಿ ನಡೆಯಲಿದೆ.

ನಾಳೆ ಬುಧವಾರ ಬೆಳಿಗ್ಗೆ 8 ಕ್ಕೆ ಶಿವ ಧ್ವಜಾರೋಹಣ ನಿಜಲಿಂಗಪ್ಪ ಮಾರಯ್ಯ ಅವರಿಂದ ನೆರವೇರಲಿದೆ.

# ವೇಗದ ಮಾಹಿತಿಗೆ ಕ್ವಾಂಟಮ್ ತಂತ್ರಜ್ಞಾನ ಅನಿವಾರ್ಯ



**ದಾವಿವಿ ವಿಶೇಷ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರೊ.ಮಹೇಶ್**

ದಾವಣಗೆರೆ, ಏ.3- ಮಾಹಿತಿ ತಂತ್ರಜ್ಞಾನ, ಜೀವ ವಿಜ್ಞಾನ, ವೈದ್ಯಕೀಯ, ಬಾಹ್ಯಾಕಾಶ ಸೇರಿದಂತೆ ಬಹುತೇಕ ಎಲ್ಲ ಕ್ಷೇತ್ರಗಳಲ್ಲಿಯೂ ಮಹತ್ವದ ಪಾತ್ರ ನಿರ್ವಹಿಸುವ ಕ್ವಾಂಟಮ್ ಎಂಟ್ಯಾಂಜಲ್‌ಮೆಂಟ್ ಪರಿಮಾಣವು ಭವಿಷ್ಯದ ಅತೀ ವೇಗದ ಮಾಹಿತಿಯ ಅನಿವಾರ್ಯ ಮಾರ್ಗವಾಗಲಿದೆ ಎಂದು ಬೆಂಗಳೂರು ವಿಶ್ವವಿದ್ಯಾನಿಲಯ ಎಲೆಕ್ಟ್ರಾನಿಕ್ ವಿಜ್ಞಾನ ವಿಭಾಗದ ಪ್ರೊ. ಎಚ್.ಎಂ.ಮಹೇಶ್ ಅಭಿಪ್ರಾಯಪಟ್ಟರು.

ಕರ್ನಾಟಕ ಅಸೋಸಿಯೇಷನ್ ಫಾರ್ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್ (ಕೆಎಎಎಸ್) ಮತ್ತು ದಾವಣಗೆರೆ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ಏರ್ಪಡಿಸಿದ್ದ ವಿಶೇಷ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅಪ್ಲಿಕೇಷನ್ಸ್ ಆಫ್ ಕ್ವಾಂಟಮ್ ಎಂಟ್ಯಾಂಜಲ್‌ಮೆಂಟ್ ಕುರಿತು ಮಾತನಾಡಿದ ಅವರು, ಇದುವರೆಗೆ ಬೈನರಿ ಬಿಟ್ ತಂತ್ರಜ್ಞಾನವು ಮಾಹಿತಿ ಕ್ಷೇತ್ರದ ಮೂಲ ಆಕರವಾಗಿತ್ತು. ಆದರೆ ಪ್ರಸ್ತುತ ಕ್ವಾಂಟಮ್ ಬಿಟ್ ಆ ಸ್ಥಾನವನ್ನು ಆಕ್ರಮಿಸುತ್ತಿದ್ದು, ನವಪೀಳಿಗೆಯ ತಂತ್ರಜ್ಞಾನವು ಇದನ್ನೇ ಸಂಪೂರ್ಣವಾಗಿ ಅವಲಂಬಿಸಿ, ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಪ್ರತಿದಿನವೂ ಹೊಸ ಆವಿಷ್ಕಾರಗಳು ಹೊರ ಬರುತ್ತಿವೆ. ಮಾಹಿತಿ ವಿನಿಮಯ, ಜೀವ ರಕ್ಷಕ ವಿಜ್ಞಾನಗಳಿಗೆ ಕ್ವಾಂಟಮ್ ಎಂಟ್ಯಾಂಜಲ್‌ಮೆಂಟ್ ಮಾರ್ಗದರ್ಶಿ ಸೂತ್ರವಾಗಲಿದೆ ಎಂದು ನುಡಿದರು.

ಬೆಂಗಳೂರಿನ ಐಐಎಸ್‌ಸಿ ಪ್ರಾಧ್ಯಾಪಕ ಡಾ. ಎ.ಟಿ.ಬಿಜು, ಸಾವಯವ ಅಣುಗಳನ್ನು ಉಪಯುಕ್ತ, ಪರಿಣಾಮಕಾರಿ ಮತ್ತು ವ್ಯವಸ್ಥಿತ ರೀತಿಯಲ್ಲಿ ತಯಾರಿಸಲು ಅವಕಾಶ ಮಾಡಿಕೊಡುವ ತಂತ್ರಜ್ಞಾನವಾದ ಕ್ಲಿಕ್ ಕೆಮಿಸ್ಟ್ರಿಯು ಬಹು ಆಯಾಮಗಳ ಅಧ್ಯಯನವಾಗಿದೆ. ಜಾಗತಿಕ ಮಟ್ಟದಲ್ಲಿ ಹೆಚ್ಚು ಮನ್ನಣೆ ಪಡೆಯುತ್ತಿರುವ ಈ ಕ್ಷೇತ್ರವು ರಾಸಾಯನ ವಿಜ್ಞಾನ ಕ್ಷೇತ್ರದ ಸಂಶೋಧನೆಯಲ್ಲಿ ಹೊಸ ದೃಷ್ಟಿಕೋನವನ್ನು ನಿರ್ಮಿಸಿದೆ ಎಂದು ಹೇಳಿದರು.

ಬೆಂಗಳೂರು ಐಐಎಸ್‌ಸಿಯ ಡಾ. ಮಾಂಟಾ ಗೇಯನ್ ಅವರು, ಅತಿಮಾನವನ ಮೂಲ ಹಾಗೂ ಅವರಲ್ಲಿರುವ ರೋಗ ನಿರೋಧಕ ಶಕ್ತಿಯ ಕಾರಣಗಳು ಅಧ್ಯಯನ ಯೋಗ್ಯವಾಗಿವೆ. ಈ ಹಿನ್ನೆಲೆಯಲ್ಲಿಯೇ ಅತಿಮಾನವರು ಕೊರೊನಾ ರೋಗಾಣುವಿನ ನಂತರ ಸಾಂಕ್ರಾಮಿಕದಿಂದ ಯಾವುದೇ ಪರಿಣಾಮವನ್ನು ಎದುರಿಸಲಿಲ್ಲ ಎಂದು ನುಡಿದರು.

ವಿಶ್ರಾಂತ ಕುಲಪತಿ ಮತ್ತು ಅಧ್ಯಕ್ಷ ಪ್ರೊ. ಕೆ.ಸಿದ್ದಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಕುಲಪತಿ ಪ್ರೊ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಿದ್ದರು. ವಿವಿ ವಿಜ್ಞಾನ ನಿಕಾಯದ ಡೀನ್ ಪ್ರೊ.ರಾಮಲಿಂಗಪ್ಪ, ಕಾಸ್ ಕಾರ್ಯಕಾರಿ ಸಮಿತಿ ಸದಸ್ಯ ಡಾ. ಲಿಂಗರಾಜು ಉಪಸ್ಥಿತರಿದ್ದರು. ಕಾಸ್ ಚಾಪ್ಟರ್ ಕಾರ್ಯದರ್ಶಿ ಪ್ರೊ.ಎಸ್.ಶಿಶುಪಾಲ ಸ್ವಾಗತಿಸಿದರು. ಭೌತವಿಜ್ಞಾನ ವಿಭಾಗದ ಅಧ್ಯಕ್ಷ ಡಾ.ಕೆ. ಎಂ.ಈಶ್ವರಪ್ಪ ವಂದಿಸಿದರು.

## ಕಷ್ಟಗಳನ್ನು ಎದುರಿಸಿ ಬದುಕು ಕಟ್ಟಿಕೊಳ್ಳಿ: ರೇಖಾ



ದಾವಣಗೆರೆ,ಏ.3- ಮಹಿಳೆ ಮೊದಲು ತಾನು ಅಬಲೆಯಲ್ಲ ಎನ್ನುವುದನ್ನು ಮನದಟ್ಟುಮಾಡಿಕೊಳ್ಳಬೇಕು. ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಿ ನಿಂತು, ಬದುಕು ಕಟ್ಟಿಕೊಳ್ಳಬೇಕು ಎಂದು ಮಹಾನಗರ ಪಾಲಿಕೆ ಸದಸ್ಯೆ ರೇಖಾ ಸುರೇಶ್ ಗಂಡಗಾಳೆ ಹೇಳಿದರು.

ನಗರದ ಶುಭೋದಯ ಸೇವಾ ಸಂಸ್ಥೆ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸಂಸ್ಥೆ ಮುಖ್ಯಸ್ಥರಾದ ಶಕುಂತಲಾ ಮಾತನಾಡಿ, ಸಂಸಾರದಲ್ಲಿ ವಿರಸಕ್ಕಿಂತ ಹೊಂದಾಣಿಕೆಗೆ ಮೊದಲ ಆದ್ಯತೆ ನೀಡಬೇಕು, ತಾಳ್ಮೆಯಿಂದ ಎಷ್ಟೋ ಸಮಸ್ಯೆಗಳು ಬಗೆಹರಿಯುತ್ತವೆ ಎಂದು ತಿಳಿಸಿದರು.

ಸಂಸ್ಥೆಯ ವತಿಯಿಂದ ಕೇಂದ್ರದ ನಿವಾಸಿಗಳಿಗೆ, ಮತ್ತವರ ಮಕ್ಕಳಿಗೆ ಬಟ್ಟೆ, ಬಚಪನ್ ಶಾಲೆ ವತಿಯಿಂದ ಪ್ರಾಂಶುಪಾಲ ಚಂದ್ರಚಾರ್ ಮಕ್ಕಳಿಗೆ ಡಿಕ್ಷನರಿಗಳನ್ನು ವಿತರಿಸಿದರು. ಸ್ವಧಾರ್ ಕೇಂದ್ರದ ನೈಬರ್ ಹುಡ್ ಕಮಿಟಿ ಸದಸ್ಯರಾದ ಸರೋಜಮ್ಮ, ಉಮಾ, ಆರೋಗ್ಯ ಇಲಾಖೆ ಆನಂದ ಮೂರ್ತಿ, ವಿದ್ಯಾನಗರ ರೋಟರಿ ಸಂಸ್ಥೆ ಅಧ್ಯಕ್ಷ ಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಚುನಾವಣೆ : ಅಬಕಾರಿ ಅಕ್ರಮ ತಡೆಗೆ ಹೆಲ್ಪ್‌ಲೈನ್ ಆರಂಭ

ದಾವಣಗೆರೆ, ಏ. 3- ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023 ಹಿನ್ನೆಲೆಯಲ್ಲಿ ಚುನಾವಣೆ ಸಮಯದಲ್ಲಿ ನಡೆಯುವ ಅಬಕಾರಿ ಅಕ್ರಮಗಳ ಮಾಹಿತಿ ನೀಡಲು ಅನುಕೂಲವಾಗಲು ಜಿಲ್ಲೆಯ ಅಬಕಾರಿ ಇಲಾಖೆಯ ಟೋಲ್ ಫ್ರೀ ನಂ-18004250379 ಹೆಲ್ಪ್‌ಲೈನ್ ಸ್ಥಾಪಿಸಲಾಗಿದೆ. ಸಾರ್ವಜನಿಕರು ಕರೆ ಮಾಡಿ ದೂರು, ಮಾಹಿತಿ ನೀಡಬಹುದು.

ಮತದಾರರನ್ನು ಸೆಳೆಯುವ ಸಲುವಾಗಿ ಕಳಪೆ ಗುಣಮಟ್ಟದ ನಕಲಿ ಮದ್ಯ, ಸಾರಾಯಿಗಳ ತಯಾರಿಕೆ, ಸಾಗಾಣಿಕೆ, ಶೇಖರಣೆ ಮಾಡಿ ಸಾರ್ವಜನಿಕರಿಗೆ ವಿತರಿಸುವುದು ಅಬಕಾರಿ ಕಾಯ್ದೆ ಪ್ರಕಾರ ಅಪರಾಧವಾಗಿದೆ ಹಾಗೂ ಸಾರ್ವಜನಿಕರು ಇದನ್ನು ಸೇವಿಸುವುದರಿಂದ ಜೀವ ಕಳೆದುಕೊಳ್ಳುವ ಸಂಭವವಿರುತ್ತದೆ.

ಇಂತಹ ಅಕ್ರಮಗಳ ಮಾಹಿತಿ ನೀಡಲು ಅನುಕೂಲವಾಗುವಂತೆ ಜಿಲ್ಲೆಯಾದ್ಯಂತ ಹೆಲ್ಪ್‌ಲೈನ್‌ಗಳನ್ನು ಸ್ಥಾಪಿಸಲಾಗಿದೆ.

ಜಿಲ್ಲಾ ಅಬಕಾರಿ ಉಪ ಆಯುಕ್ತರ ಕಚೇರಿ ಕಂಟ್ರೋಲ್ ರೂಂ.ಸಂ-08192-230921 ಹಾಗೂ ಅಬಕಾರಿ ಉಪ ಆಯುಕ್ತರ ಮೊ. ಸಂ-9449597061/9449597063, ದಾವಣಗೆರೆ ಉಪ ವಿಭಾಗ ಕಂಟ್ರೋಲ್ ರೂಂ ಸಂ-08192-225042, ಹಾಗೂ ಅಬಕಾರಿ ಉಪ ಅಧೀಕ್ಷಕರ ಮೊ.ಸಂ-9449597064/9449597065, ಹೊನ್ನಾಳಿ ಉಪ ವಿಭಾಗದ ಕಂಟ್ರೋಲ್ ರೂಂ.ಸಂ-08188-295202 ಹಾಗೂ ಅಬಕಾರಿ ಉಪ ಅಧೀಕ್ಷಕರ ಮೊ.ಸಂ-9449597066/9449597067, ದಾವಣಗೆರೆ ವಲಯ ನಂ-1 ಕಂಟ್ರೋಲ್ ರೂಂ.ಸಂ- 08192-224177, ದಾವಣಗೆರೆ ವಲಯ ನಂ-2 ಕಂಟ್ರೋಲ್ ರೂಂ.ಸಂ- 08192-221150, ಹರಿಹರ ವಲಯದ ಕಂಟ್ರೋಲ್ ರೂಂ.ಸಂ-08192-242166, ಚನ್ನಗಿರಿ ವಲಯದ ಕಂಟ್ರೋಲ್ ರೂಂ.ಸಂ- 08192-295445, ಹೊನ್ನಾಳಿ ವಲಯದ ಕಂಟ್ರೋಲ್ ರೂಂ.ಸಂ- 08192-295315 ಸಂಖ್ಯೆಗಳಿಗೆ ಕರೆ ಮಾಡಿ ದೂರು/ ಮಾಹಿತಿ ನೀಡಬಹುದು ಮತ್ತು ಮಾಹಿತಿದಾರರ ಹೆಸರು ಇತ್ಯಾದಿ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತದೆ ಎಂದು ಜಿಲ್ಲಾ ಡೆಪ್ಯೂಟಿ ಕಮೀಷನರ್ ಎಕ್ಸೈಜ್ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಜೇನುಗೂಡು ಮಹಿಳಾ ಸಮಾಜದ ವಾರ್ಷಿಕೋತ್ಸವ

ಸಿದ್ಧವೀರಪ್ಪ ಬಡಾವಣೆಯ ಜೇನುಗೂಡು ಮಹಿಳಾ ಸಮಾಜದ ಮೂರನೇ ವಾರ್ಷಿಕೋತ್ಸವ ಸಮಾರಂಭವು ಸದ್ಯೋಜಾತ ಮಠದಲ್ಲಿ ಇಂದು ಮಧ್ಯಾಹ್ನ 2.30ಕ್ಕೆ ನಡೆಯಲಿದೆ.

ಜೇನುಗೂಡು ಮಹಿಳಾ ಸಮಾಜದ ಅಧ್ಯಕ್ಷರಾದ ಸುಜಾತ ನಾಗೇಶ್, ಕಾರ್ಯದರ್ಶಿ ಮಧು ಉಮೇಶ್ ಅಧ್ಯಕ್ಷತೆ ವಹಿಸುವರು. ಬಾಪೂಜಿ ವಿದ್ಯಾಸಂಸ್ಥೆಯ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು. ಅತಿಥಿಗಳಾಗಿ ಬ್ರಾಹ್ಮಣ ಸಮಾಜದ ಅಧ್ಯಕ್ಷರಾದ ನಳಿನಿ ಅಚ್ಯುತ್ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಎಲಿಸವ್ವ ಜಾನಪದ ಕಲಾ ತಂಡದ ಅಧ್ಯಕ್ಷರಾದ ಮೀನಾಕ್ಷಿ ವೆಂಕಟೇಶ್ ಅವರಿಗೆ ಸನ್ಮಾನಿಸಲಾಗುವುದು.

ಮಹಿಳಾ ಸಮಾಜದ ಖಜಾಂಚಿ ವಿದ್ಯಾ ಭಾಸ್ಕರ್, ಸಹ ಕಾರ್ಯದರ್ಶಿ ರೇಖಾ ಸಿದ್ದಲಿಂಗಪ್ಪ, ನಿರ್ದೇಶಕರುಗಳಾದ ಕೊಟ್ರಮ್ಮ ಮುರುಗೇಶ್, ರೂಪಾ ಚನ್ನವೀರಸ್ವಾಮಿ, ವಿಜಯ ವೀರೇಂದ್ರ ಉಪಸ್ಥಿತರಿರುವರು.

## ಬಸವಾಪಟ್ಟಣ : ಶ್ರೀ ಚೌಡೇಶ್ವರಿ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಸಹಾಯಧನ



ದಾವಣಗೆರೆ, ಏ. 3- ಬಸವಾಪಟ್ಟಣ ಯೋಜನಾ ಕಚೇರಿ ವ್ಯಾಪ್ತಿಯ ಹರಲೀಪುರ ಶ್ರೀ ಚೌಡೇಶ್ವರಿ ಅಮ್ಮನವರ ದೇವಸ್ಥಾನ ಜೀರ್ಣೋದ್ಧಾರಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ವತಿಯಿಂದ 1,50,000 ರೂ ಸಹಾಯ ಧನ ನೀಡಲಾಯಿತು.

ದಾವಣಗೆರೆ ಜಿಲ್ಲಾ ನಿರ್ದೇಶಕರು, ಕಮಿಟಿಯ ಪದಾಧಿಕಾರಿಗಳಿಗೆ ಸಹಾಯಧನ ಹಸ್ತಾಂತರಿಸಲಾಯಿತು. ಸಿದ್ದಯ್ಯ ಸ್ವಾಗತಿಸಿದರು. ಸೇವಾ ಪ್ರತಿನಿಧಿ ಶ್ರೀಮತಿ ರೇಖಾ ವಂದಿಸಿದರು. ಮೇಲ್ವಿಚಾರಕಿ ಶ್ರೀಮತಿ ಚಂದ್ರಪ್ರಭ ನಿರೂಪಿಸಿದರು.

## ಜಿ.ಎಂ.ಐ.ಟಿ. ವಿದ್ಯಾರ್ಥಿಗಳಿಗೆ ಬಹುಮಾನ



ದಾವಣಗೆರೆ, ಏ. 3 - ಜಿ.ಎಂ.ಐ.ಟಿ. ತಾಂತ್ರಿಕ ಮಹಾವಿದ್ಯಾಲಯದ ಗಣಕ ಯಂತ್ರ ವಿಭಾಗದ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳ ತಂಡ ಕಾರ್‌ಪೂಲ್ (ಪ್ರಣವ್ ವಿ, ಪೂಜಾ ಎಚ್ ಪಿ, ವನಮಾಲಿ ಸೆಡಿಂಬಿ ಮತ್ತು ನವಪ್ರೀತಮ್ ಎನ್) ಇವರು 24 ಮತ್ತು 25ನೇ ಮಾರ್ಚ್ 2023 ರಂದು ಗದಗ ಜಿಲ್ಲೆ ತೋಂಟದಾರ್ಯ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ಡಿಲಿತ್ ಪ್ರೈ. ಲಿಮಿಟೆಡ್ ಅವರ ಸಹಯೋಗದಲ್ಲಿ ಅಯೋಜಿಸಿದ್ದ ಟಿ.ಸಿ.ಇ ಹ್ಯಾಕಥಾನ್ 2023 ರಲ್ಲಿ ಭಾಗವಹಿಸಿ ಎರಡನೇ ಬಹುಮಾನ (20,000 ನಗದು) ಪಡೆದಿದ್ದಾರೆ.

# ಮಕ್ಕಳ ಬುದ್ಧಿಶಕ್ತಿ ಬೆಳವಣಿಗೆಗೆ ಬೇಸಿಗೆ ಶಿಬಿರಗಳು ಸಹಕಾರಿ



ದಾವಣಗೆರೆ, ಏ. 3- ಮಕ್ಕಳಲ್ಲಿರುವ ಸುಪ್ತ ಪ್ರತಿಭೆ ಅನಾವರಣಕ್ಕೆ ಬೇಸಿಗೆ ಶಿಬಿರಗಳು ಅವಶ್ಯಕ ಎಂದು ಶ್ರೀ ಜಗದ್ಗುರು ಜಯವಿಭವ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಮನೋಹರ ಎಸ್. ಚಿಗಟೇರಿ ತಿಳಿಸಿದರು

ಇಲ್ಲಿನ ವಿನೋಬನಗರದ 1ನೇ ಮುಖ್ಯರಸ್ತೆ ಯಲ್ಲಿರುವ ಶ್ರೀ ಜಗದ್ಗುರು ಜಯದೇವ ಮುರುಘ ರಾಜೇಂದ್ರ ಪ್ರೌಢಶಾಲೆಯಲ್ಲಿ ಮಕ್ಕಳಿಗಾಗಿ ಏರ್ಪಡಿಸಲಾಗಿರುವ ಬೇಸಿಗೆ ಚಿತ್ರಕಲಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ವರ್ಷಪೂರ್ತಿ ಬರೀ ಓದು ಓದು ಎಂದು ವೇಳೆಯನ್ನು ಕಳೆದಿರುತ್ತಾರೆ. ಮಕ್ಕಳ ಪರೀಕ್ಷೆ ಮುಗಿ ದಿದೆ ಎಂದು ವ್ಯರ್ಥವಾಗಿ ರಜೆಯನ್ನು ಕಳೆಯದೇ ಇಂತಹ ಬೇಸಿಗೆ ಶಿಬಿರದಂತಹ ಪಠ್ಯೇತರ ಚಟು ವಟಿಕೆಗಳಲ್ಲಿ ಭಾಗವಹಿಸುವುದರಿಂದ ನಿಮ್ಮ ಬುದ್ಧಿ ಶಕ್ತಿಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಶಾಲೆಯ ಮುಖ್ಯೋಪಾಧ್ಯಾಯ ಎಸ್.ನಾಗರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ನಮ್ಮ ಈ ಶಾಲೆಯಲ್ಲಿ ಕಳೆದ 6 ವರ್ಷಗಳಿಂದ ಇಂತಹ ಬೇಸಿಗೆ ಚಿತ್ರಕಲಾ ಶಿಬಿರ ವನ್ನು ಆಯೋಜಿಸುತ್ತಾ ಬಂದಿದ್ದೇವೆ. ಈ ಶಿಬಿರದಲ್ಲಿ ಮಕ್ಕಳು ಚಿತ್ರಕಲೆಯ ವಿವಿಧ ಪ್ರಕಾರಗಳನ್ನು ಆಟ ಆಡುತ್ತಾ ಕಲಿತು ಸಂತೋಷದಿಂದ ಹೊಸ ಕೌಶಲ್ಯವನ್ನು ನಿಮ್ಮದಾಗಿಸಿಕೊಳ್ಳಿರಿ. ಇದರಿಂದ ನೀವು ಜಿಲ್ಲಾ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಕೀರ್ತಿ ತರುವಂತಾಗಿರಿ ಎಂದು ಶುಭ ಹಾರೈಸಿದರು.

ಶಿಬಿರದ ಸಂಚಾಲಕ ಶಾಂತಯ್ಯ ಪರಡಿಮಠ ಪ್ರಾಸ್ತಾವಿಕವಾಗಿ ಮಾತನಾಡಿ, ಈ ಬೇಸಿಗೆ ಶಿಬಿರದಲ್ಲಿ ಪ್ರತಿದಿನ ಚಿತ್ರಕಲೆಗೆ ಸಂಬಂಧಿಸಿದ ಒಂದೊಂದು ರೀತಿಯ ವಿವಿಧ ಮಾಧ್ಯಮದ ಪ್ರಕಾರಗಳಾದ ಪೆನ್ಸಿಲ್ ಡ್ರಾಯಿಂಗ್, ಕಲರಿಂಗ್, ರೇಖಾ ಚಿತ್ರ, ಶೇಡಿಂಗ್ಸ್, ಗ್ರೀಟಿಂಗ್ಸ್, ಥ್ರೆಡ್ ಆರ್ಟ್, ಪ್ರಿಂಟಿಂಗ್, ಪೇಪರ್ ಕ್ರಾಫ್ಟ್, ಗ್ಲಾಸ್ ಪೇಂಟಿಂಗ್ ಸೇರಿದಂತೆ ವಿವಿಧ ರೀತಿಯ ಕಲಾ ಪ್ರಕಾರಗಳ ಬಗ್ಗೆ ನಿಮಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯರಾದ ಎಸ್.ಎಂ.ಶೈಲಜ, ಶಿಕ್ಷಕರಾದ ಎಚ್.ಬಿ. ಜ್ಯೋತಿ, ಜಿ.ಎಂ.ಪ್ರಭು, ಕೆ.ಪಿ.ರುದ್ರೇಶ ಮೂರ್ತಿ, ಲಿಂಗರಾಜ ಗಾಜಿ, ಎಸ್.ಶ್ವೇತಾ ಸೇರಿದಂತೆ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

## ರಾಹುಲ್‌ಗೆ ಜಾಮೀನು

**(1ನೇ ಪುಟದಿಂದ)** ಬೆಂಬಲಿಗರು ನ್ಯಾಯಾಲಯದ ಹೊರಗೆ ನೆರೆದಿದ್ದರು. ಈ ಹಿನ್ನೆಲೆಯಲ್ಲಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ನಿಯೋಜಿಸಲಾಗಿತ್ತು.

ನ್ಯಾಯಾಲಯ ಜಾಮೀನು ನೀಡಿದ ನಂತರ ಹೇಳಿಕೆ ನೀಡಿರುವ ರಾಹುಲ್ ಗಾಂಧಿ, ನಾವು ಪ್ರಜಾಪ್ರಭುತ್ವ ರಕ್ಷಣೆಗಾಗಿ 'ಮಿತ್ರಕಾಲ್' ವಿರುದ್ಧ ಹೋರಾಟ ನಡೆಸುತ್ತಿದ್ದೇವೆ. ಸತ್ಯವೇ ನನ್ನ ಅಸ್ತ್ರವಾಗಿದೆ ಹಾಗೂ ಸತ್ಯವೇ ನನಗೆ ಬೆಂಬಲ ಎಂದಿದ್ದಾರೆ.

ಸೂರತ್ ನ್ಯಾಯಾಲಯದ ಎದುರು ಬಲಪ್ರದರ್ಶನ ನಡೆಸಲಾಗಿದೆ. ಇದು ರಾಹುಲ್ ಗಾಂಧಿ ಅವರ ಉದ್ಧಟತನ ತೋರಿಸುತ್ತದೆ. ಇದು ಸಂವಿಧಾನಿಕವಾಗಿಯೂ ಸರಿಯಲ್ಲ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಹೇಳಿದ್ದಾರೆ.

ಆರೋಪ ತಳ್ಳಿ ಹಾಕಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಇದು ರಾಹುಲ್ ಗಾಂಧಿಯವರಿಗೆ ಬೆಂಬಲಿಸುವ ಸಂಕೇತವೇ ಹೊರತು, ಬಲಪ್ರದರ್ಶನವಲ್ಲ ಎಂದಿದ್ದಾರೆ.

## ನ್ಯಾಯಮೂರ್ತಿ ಬಗ್ಗೆ ಆಡಿದ ಮಾತಿಗೆ ಖಟ್ಟರ್ ವಿಷಾದ

ಚಂಡೀಘಡ, ಏ. 3 – ನ್ಯಾಯಮೂರ್ತಿಯೊಬ್ಬರ ಬಗ್ಗೆ ತಾವು ಆಡಿದ ಮಾತುಗಳನ್ನು ವಾಪಸ್ ಪಡೆದಿರುವ ಹರಿಯಾಣದ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್, ತಮ್ಮ ಮಾತುಗಳಿಗಾಗಿ ವಿಷಾದಿಸಿದ್ದಾರೆ.

ಭಿವಾನಿ ಜಿಲ್ಲೆಯಲ್ಲಿ ಗ್ರಾಮಸ್ಥರ ಜೊತೆ ಸಂವಾದ ನಡೆಸುವಾಗ ಮಾತನಾಡಿದ್ದ ಖಟ್ಟರ್, ನಿಮ್ಮ ಸಮಸ್ಯೆ ಬಗೆಹರಿಯಲಿದೆ, ಯೋಚನೆ ಮಾಡಬೇಡಿ. ಒಬ್ಬರು ನ್ಯಾಯಮೂರ್ತಿ ಇದ್ದಾರೆ... ಎಂದಿದ್ದರು.

ಖಟ್ಟರ್ ಅವರು ಹೈಕೋರ್ಟ್ ನ್ಯಾಯಮೂರ್ತಿ ಬಗ್ಗೆ ಆಕ್ಷೇಪಾರ್ಹ ಮಾತುಗಳನ್ನಾಡಿದ್ದಾರೆ. ಇದು ನ್ಯಾಯಾಂಗದ ಮೇಲೆ ನಡೆಸಲಾದ ಹಲ್ಲೆ ಎಂದು ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದ್ದರು.

# ಪುನೀತ್ ಜನಮಾನಸದಲ್ಲಿ ಶಾಶ್ವತ



ದಾವಣಗೆರೆ, ಏ.3- ಚಿಕ್ಕ ವಯಸ್ಸಿನಲ್ಲಿಯೇ ಕಲಾಸೇವೆಗೆ ಪ್ರವೇಶಿಸಿ ಜನ ಮಾನಸದಲ್ಲಿ ಅಚ್ಚಳಿಯದೇ ಉಳಿಯುವ ಜೊತೆಗೆ, ಅನೇಕರಿಗೆ ಸಮಾಜ ಸೇವೆಯ ಮೂಲಕ ಶಾಶ್ವತ ಬದುಕು ಕಟ್ಟಿಕೊಟ್ಟ ಚೇತನ ನಟ ಪುನೀತ್ ರಾಜ್‌ಕುಮಾರ್ ಎಂದು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಜಿಲ್ಲಾ ಕಾರ್ಯದರ್ಶಿ ಎಂ.ಗುರುಸಿದ್ಧಸ್ವಾಮಿ ತಿಳಿಸಿದರು.

ಶುಕ್ರವಾರ ಆವರಗೆರೆಯ ಡಾ. ಪುನೀತ್ ರಾಜ್‌ಕುಮಾರ್ ಅಭಿಮಾನಿ ಬಳಗದಿಂದ ಶ್ರೀ ಬನಶಂಕರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ ದಿ|| ಪುನೀತ್ ರಾಜ್‌ಕುಮಾರ್ ಹುಟ್ಟು ಹಬ್ಬದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಪುನೀತ್ ರಾಜಕುಮಾರ್ ತನ್ನ ದುಡಿಮೆಯ ಒಂದಿಷ್ಟು ಭಾಗವನ್ನು ಸಮಾಜ ಸೇವೆಗೆ ಮೀಸಲಿಟ್ಟು, ಶಿಕ್ಷಣ, ಆರೋಗ್ಯ, ಸಾಮಾಜಿಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಈ ಕಾರಣಕ್ಕಾಗಿಯೇ ಜನರ ಹೃದಯದಲ್ಲಿ ಸ್ಥಾನ ಪಡೆದಿದ್ದು, ಪುನೀತ್ ರಾಜ್‌ಕುಮಾರ್ ಅವರ ಲಕ್ಷಾಂತರ ಅಭಿಮಾನಿಗಳು ಹಾಗೂ ಸಂಘಟನೆಗಳು ಅವರ ಆದರ್ಶ ಮುಂದುವರೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯ ಎಂದರು.

ಈ ವೇಳೆ ದಿ.ಡಾ.ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಬಸವರಾಜು ಮತ್ತು ತಂಡದವರು ಶ್ರೀ ಬನಶಂಕರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ರೂ.12000 ಮೌಲ್ಯದ ಊಟದ ತಟ್ಟೆಗಳನ್ನು ವಿತರಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಟಿ.ಶೇಖರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕರಾದ ಸುರೇಶ್ ಹುಲ್ಲತ್ತಿ, ಶ್ರೀಮತಿ ಲಕ್ಷ್ಮಿ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಪಂಚಮಸಾಲಿ ಕಛೇರಿಯಲ್ಲಿ ಆರೋಗ್ಯ ಶಿಬಿರ



ದಾವಣಗೆರೆ, ಏ.3- ಜಿಲ್ಲಾ ವೀರಶೈವ ಲಿಂಗಾಯತ ಪಂಚಮಸಾಲಿ ಸಮಾಜ ಮತ್ತು ಹರ ಸೇವಾ ಸಂಸ್ಥೆ, ಪಂಚಮಸಾಲಿ ವಧು-ವರರ ಮಾಹಿತಿ ಕೇಂದ್ರ ಹಾಗೂ ಜಿಲ್ಲೆಯ ಎಲ್ಲಾ ಘಟಕಗಳ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಗರದ ಪಂಚಮಸಾಲಿ ಸಮಾಜದ ಕಛೇರಿಯಲ್ಲಿ ನಡೆಯಿತು. ಈ ಆರೋಗ್ಯ ತಪಾಸಣೆ ಶಿಬಿರದಲ್ಲಿ ರಕ್ತದ ಒತ್ತಡ, ಸಕ್ಕರೆ ಕಾಯಿಲೆಯ ಒಟ್ಟು 166 ಜನರಿಗೆ ಪರೀಕ್ಷಿಸಲಾಯಿತು.

ವೈದ್ಯರಾದ ಡಾ|| ರೇಣುಕಾ.ಬಿ.ಜಿ., ಫಿಜಿಷಿಯನ್. ಡಾ|| ಸಂಜಯ್ ಕುಮಾರ್ ಹೆಚ್., ಕಾರ್ಡಿಯಾಲಜಿಸ್ಟ್. ಡಾ|| ಮೋಹನ್ ಆರ್, ನೆಫ್ರೋಲಾಜಿಸ್ಟ್ ಅವರುಗಳಿಂದ ಸಲಹೆ ಮತ್ತು ಕಿಡ್ನಿ ಸಮಸ್ಯೆ, ಹೃದಯ ಸಂಬಂಧಿ ಕಾಯಿಲೆಗೆ ತಪಾಸಣೆ ಹಾಗೂ ಸಲಹೆ, ಸೂಚನೆ ನೀಡಲಾಯಿತು.

ಈ ಸಂದರ್ಭದಲ್ಲಿ ಸಮಾಜದ ಜಿಲ್ಲಾಧ್ಯಕ್ಷ ಬಿ.ಸಿ. ಉಮಾಪತಿ, ಉಪಾಧ್ಯಕ್ಷರಾದ ವಾಣಿ ಶಿವಣ್ಣ, ಎಂ. ದೊಡ್ಡಪ್ಪ, ವಧು-ವರ ಮಾಹಿತಿ ಕೇಂದ್ರದ ಅಧ್ಯಕ್ಷ ಎಂ. ಮಹೇಶ್ವರಪ್ಪ, ಕಾರ್ಯಾಧ್ಯಕ್ಷ ಉಮಾಕಾಂತ್, ಕಾರ್ಯದರ್ಶಿ ಶ್ರೀಧರ ಸಣ್ಣಪ್ಪನವರ, ಮಂಜುನಾಥ ಪುರವಂತರ್, ಬಾದಾಮಿ ಜಯಣ್ಣ, ಕೆ.ಕೆ.ನಾಗರಾಜ್, ಜಯಣ್ಣ ಬಿಸಲೇರಿ, ಕುಮಾರ ಹುಂಬಿ, ಬಾದಾಮಿ ಕರಿಬಸಪ್ಪ, ಬಾತಿ ರವಿಕುಮಾರ್, ಮಹಡಿ ತಿಪ್ಪೇಸ್ವಾಮಿ, ಜಿ. ಷಣ್ಮುಖಪ್ಪ ಮೇಷ್ಟ್ರು, ಲಿಂಗರಾಜು ಎನ್.ಎಚ್., ಶ್ರೀಮತಿ ವೀಣಾ ನಟರಾಜ್ ಬೆಳ್ಳೂಡಿ, ಶ್ರೀಮತಿ ಶಶಿಕಲಾ ಬಡದಾಳ ಮತ್ತಿತರರು ಉಪಸ್ಥಿತರಿದ್ದರು.

## ಸ್ವಾಮೀಜಿಗೆ ಬೆದರಿಕೆ, ಭದ್ರತೆಗೆ ಸೂಚನೆ

**(1ನೇ ಪುಟದಿಂದ)** ಸ್ವಾಮೀಜಿಗೆ ಕಿರುಕುಳ ನೀಡುತ್ತಿದ್ದಾರೆ. ಬಿಜೆಪಿ ಮೀಸಲಾತಿ ನೀಡಲಿಲ್ಲ ಅಂದರೆ ಅದನ್ನೇ ಅಸ್ತ್ರ ಮಾಡಿಕೊಳ್ಳಲು ಸಿದ್ಧವಾಗಿದ್ದರು ಎಂದು ಆರೋಪಿಸಿದರು.

ಇದು ಮುಖಂಡರಾದ ವಿಜಯಾನಂದ ಕಾಶಪ್ಪನವರು ಮತ್ತು ವಿನಯ್ ಕುಲಕರ್ಣಿಯವರ ನಡವಳಿಕೆಯಿಂದ ಗೊತ್ತಾಗುತ್ತದೆ. ಈಗ ಈ ಮೀಸಲಾತಿ ಬೇಡ ಅಂತ ಅವರು ಹೇಳುತ್ತಿರುವುದು ನೋಡಿದರೆ ಅವರ ರಾಜಕೀಯ ಉದ್ದೇಶವನ್ನು ತೋರಿಸುತ್ತದೆ ಎಂದು ಹೇಳಿದರು.

ಸರ್ಕಾರದ ಮೀಸಲಾತಿ ಘೋಷಣೆಯನ್ನು ಒಪ್ಪಿಕೊಂಡಿದ್ದಕ್ಕೆ ಶ್ರೀಗಳಿಗೆ ಬೆದರಿಕೆ ಕರೆಗಳು ಬರುತ್ತಿವೆ. ಮೀಸಲಾತಿ ಹೋರಾಟದ ಮುಂಚೂಣಿಯಲ್ಲಿದ್ದ ಕಾಂಗ್ರೆಸ್ ನಾಯಕರಿಂದಲೇ ಬೆದರಿಕೆ ಕರೆ ಬರುತ್ತಿವೆ ಎಂದು ಸಚಿವರು ಆರೋಪ ಮಾಡಿದ್ದರು.

**ಸ್ವಾಮೀಜಿಗೆ ಭದ್ರತೆ :** ಕೂಡಲ ಸಂಗಮದ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರಿಗೆ ಬೆದರಿಕೆ ಕರೆ ಬರುತ್ತಿವೆ ಎಂದು ಶಾಸಕ ಅರವಿಂದ ಬೆಲ್ಲದ್ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪೊಲೀಸ್ ಭದ್ರತೆ ಕಲ್ಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ.

## ಜಿ.ಬೇವಿನಹಳ್ಳಿ : 'ವಾತ್ಸಲ್ಯ' ಮನೆ ಹಸ್ತಾಂತರ



ಮಲೇಬೆನ್ನೂರು, ಏ.3- ಜಿ.ಬೇವಿನಹಳ್ಳಿ ಗ್ರಾಮದ ಗೌರಮ್ಮ ಎಂಬ ಅಂಗವಿಕಲೆ ಹಾಗೂ ವೃದ್ಧ ಮಹಿಳೆಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 'ವಾತ್ಸಲ್ಯ' ಕಾರ್ಯಕ್ರಮದಡಿಯಲ್ಲಿ ನಿರ್ಮಿಸಿರುವ ನೂತನ ಮನೆಯನ್ನು ಸೋಮವಾರ ಯೋಜನೆಯ ಜಿಲ್ಲಾ ನಿರ್ದೇಶಕ ವಿ. ವಿಜಯಕುಮಾರ್ ನಾಗನಾಳ್ ಹಸ್ತಾಂತರ ಮಾಡಿದರು.

ಅಲ್ಲದೆ, ಈ ವೇಳೆ ಗೌರಮ್ಮ ಅವರನ್ನು ಸನ್ಮಾನಿಸಿ, ಯುಗಾದಿ ಹಬ್ಬದ ಅಂಗವಾಗಿ ಬಟ್ಟೆ ಸೇರಿದಂತೆ ಗೃಹ ಬಳಕೆಯ ಅಗತ್ಯ ವಸ್ತುಗಳ 'ವಾತ್ಸಲ್ಯ' ಕಿಟ್ ವಿತರಿಸಿ, ಮಾಸಾಶನ ವೇತನವನ್ನು ಒಂದು ಸಾವಿರಕ್ಕೆ ಹೆಚ್ಚಿಸುವುದಾಗಿ ವಿಜಯಕುಮಾರ್ ತಿಳಿಸಿದರು.

'ವಾತ್ಸಲ್ಯ' ಕಾರ್ಯಕ್ರಮದಡಿ ದಾವಣಗೆರೆ ಜಿಲ್ಲೆಯ ದಾವಣಗೆರೆ, ಹೊನ್ನಾಳಿ, ಹರಿಹರ ತಾಲ್ಲೂಕುಗಳಲ್ಲಿ ಇದುವರೆಗೆ 25 ಹೊಸ ಮನೆಗಳನ್ನು ಅಸಹಾಯಕರಿಗೆ ನಿರ್ಮಿಸಿಕೊಟ್ಟಿದ್ದೇವೆ. 21 ಮನೆಗಳನ್ನು ರಿಪೇರಿ ಮಾಡಿಸಿ ಮತ್ತು 20 ಮನೆಗಳಿಗೆ ಶೌಚಾಲಯ, ಸ್ನಾನ ಗೃಹ ಕಟ್ಟಿಸಿಕೊಟ್ಟಿದ್ದೇವೆ ಎಂದು ವಿಜಯಕುಮಾರ್ ನಾಗನಾಳ್ 'ಜನತಾವಾಣಿ'ಗೆ ತಿಳಿಸಿದರು.

ಗ್ರಾ.ಪಂ. ಮಾಜಿ ಅಧ್ಯಕ್ಷ ಬಿ.ಕೆ. ಮಹೇಶ್ವರಪ್ಪ, ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ, ಜಿಗಳಿ ವಲಯ ಮೇಲ್ವಿಚಾರಕಿ ಶ್ರೀಮತಿ ಪದ್ಮಾವತಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ರಕ್ಷಿತಾ, ಸೇವಾ ಪ್ರತಿನಿಧಿ ಸವಿತಾ, ಒಕ್ಕೂಟಗಳ ಅಧ್ಯಕ್ಷ ಎ.ಕೆ. ಸೋಮಶೇಖರ್, ಮಮತಾ, ಗ್ರಾ.ಪಂ. ಸದಸ್ಯ ದೇವರಾಜ್, ಪತ್ರಕರ್ತ ಜಿಗಳಿ ಪ್ರಕಾಶ್ ಈ ವೇಳೆ ಹಾಜರಿದ್ದರು.

## ವಸಂತಚಾರ್‌ಗೆ 'ಕನ್ನಡ ಕಲಾ ಸೇವಾ ಪ್ರಶಸ್ತಿ' ಪ್ರದಾನ



ಚಳ್ಳಕೆರೆ, ಏ.3- ನಿವೃತ್ತ ಪೊಲೀಸ್ ಅಧಿಕಾರಿ ಎಸ್.ವಸಂತಚಾರ್ ರವರಿಗೆ ನಾಯಕನಹಟ್ಟಿ ಯಲ್ಲಿ 'ಕನ್ನಡ ಕಲಾ ಸೇವಾ ಪ್ರಶಸ್ತಿ'ಯನ್ನು ಶಾಸಕ ಟಿ.ರಘುಮೂರ್ತಿ ಅವರು ನೀಡಿ ಗೌರವಿಸಿದರು.

ಮೂಲತಃ ಕಲಾವಿದರಾದ ಚಳ್ಳಕೆರೆಯ ವಸಂತಚಾರ್ ಸು.24 ವರ್ಷ ಪೊಲೀಸ್ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ, 2000 ಇಸವಿಯಲ್ಲಿ ಸ್ವಯಂ ನಿವೃತ್ತಿ ಪಡೆದು 'ಶ್ರುತಿ ಶ್ರೀ ಆರ್ಕೆಸ್ಟ್ರಾ' ಪ್ರಾರಂಭಿಸಿ ಸಾಕಷ್ಟು ಹೆಸರು ಗಳಿಸಿದ್ದಾರೆ. ವರನಟ ಡಾ. ರಾಜಕುಮಾರ್ ಅಪ್ಪಟ ಅಭಿಮಾನಿ ಆಗಿರುವ ಇವರು ಜ್ಯೂ.ವಿಷ್ಣುವರ್ಧನ್ ಜೊತೆ ಸೇರಿ ಭೀಮಸಮುದ್ರದಲ್ಲಿ ಹಿರಿಯ ಕಲಾವಿದರಾದ ಹೊನ್ನವಳ್ಳಿ ಕೃಷ್ಣ, ಟೆನ್ನಿಸ್ ಕೃಷ್ಣ, ಬ್ಯಾಂಕ್ ಜನಾರ್ಧನ ಸಹಯೋಗದಲ್ಲಿ ದೊಡ್ಡ ಕಾರ್ಯಕ್ರಮ ಹಮ್ಮಿಕೊಂಡು ಯಶಸ್ವಿಗೊಳಿಸುವ ಮೂಲಕ ಜನರ ಮೆಚ್ಚುಗೆ ಗಳಿಸಿದ್ದರು. ಅಲ್ಲದೇ ಜ್ಯೂ.ವಿಷ್ಣು ಜೊತೆಗೂಡಿ ಹತ್ತು ಹಲವು ಕಾರ್ಯಕ್ರಮಗಳನ್ನು ನಡೆಸಿದ್ದಾರೆ.

## ನಾಗರಸನಹಳ್ಳಿಯಲ್ಲಿ ಇಂದಿನಿಂದ ವೀರಭದ್ರೇಶ್ವರ ಸ್ವಾಮಿ ರಥೋತ್ಸವ



ದಾವಣಗೆರೆ ತಾಲ್ಲೂಕಿನ ನಾಗರಸನಹಳ್ಳಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ ಸ್ವಾಮಿಯ ಗುಗ್ಗಳ, ಕೆಂಡದಾರ್ಚನೆ ಮತ್ತು ಮಹಾರಥೋತ್ಸವವು ಇಂದಿನಿಂದ ಮೂರು ದಿನ ನಡೆಯಲಿದೆ. ಇಂದು ಸಾಯಂಕಾಲ 'ಮುತ್ತೇನಹಳ್ಳಿ ಶ್ರೀ ದುರ್ಗಾಂಬಿಕಾ ದೇವಿ ಮತ್ತು ಶ್ರೀ ವೀರಭದ್ರೇಶ್ವರ ಸ್ವಾಮಿಯನ್ನು ಕರೆತರುವುದು, ಗ್ರಾಮದ ರಾಜಬೀದಿಗಳಲ್ಲಿ ಮೆರವಣಿಗೆ ನಡೆಸಲಾಗುವುದು.

## 6ರಂದು ನಗರದಲ್ಲಿ ಶೋಭಾ ಯಾತ್ರೆ

ದಾವಣಗೆರೆ, ಏ.3- ಶ್ರೀ ಹನುಮ ಜಯಂತಿ ಶೋಭಾಯಾತ್ರೆ ಸಮಿತಿ ವತಿಯಿಂದ ಶ್ರೀ ಹನುಮ ಜಯಂತಿ ಅಂಗವಾಗಿ ಇದೇ ದಿನಾಂಕ 6ರ ಗುರುವಾರ ನಗರದಲ್ಲಿ ಶೋಭಾ ಯಾತ್ರೆ ಹಮ್ಮಿಕೊಳ್ಳಲಾಗಿದೆ. ಗುರುವಾರ ಸಂಜೆ 4.30ಕ್ಕೆ ಶೋಭಾಯಾತ್ರೆ ಆರಂಭವಾಗಲಿದ್ದು, ನಿಜಲಿಂಗಪ್ಪ ಬಡಾವಣೆಯ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಪಿಜೆ. ಬಡಾವಣೆಯ ಶ್ರೀರಾಮ ಮಂದಿರದವರೆಗೆ ಶೋಭಾಯಾತ್ರೆ ನಡೆಯಲಿದೆ.

## ಕುಣೆಬೆಳಕೆರೆಯಲ್ಲಿ ಇಂದು ರಥೋತ್ಸವ

ಮಲೇಬೆನ್ನೂರು ಸಮೀಪದ



ಕುಣೆಬೆಳಕೆರೆ ಗ್ರಾಮದ ಶ್ರೀ ವೀರಾಂಜನೇಯ ಸ್ವಾಮಿಯ ರಥೋತ್ಸವವು ಇಂದು ಬೆಳಿಗ್ಗೆ 8 ಗಂಟೆಗೆ ಜರುಗಲಿದೆ. ರಥೋತ್ಸವದ ನಂತರ ಭಕ್ತಾದಿಗಳಿಂದ ವಿವಿಧ ಸೇವೆಗಳು ನಡೆಯಲಿದ್ದು, ಸಾಯಂಕಾಲ 4 ಗಂಟೆಗೆ ಮುಳ್ಳೋತ್ಸವ, 6 ಕ್ಕೆ ಓಕುಳಿ ಇರುತ್ತದೆ. ಏ.5ರ ಬುಧವಾರ ಸಕಲ ದೇವರುಗಳ ಉತ್ಸವದ ನಂತರ ಸಾಯಂಕಾಲ 4 ಕ್ಕೆ ಭೂತ ಸೇವೆಯೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

# ಬೇಸಿಗೆ ಕುಡಿಯುವ ನೀರಿನ ಸಮಸ್ಯೆಗೆ ತಕ್ಷಣ ಸ್ಪಂದಿಸಬೇಕು

### ಜಿಲ್ಲೆಯ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ನಿರ್ದೇಶನ



ದಾವಣಗೆರೆ,ಏ.3- ಜಿಲ್ಲೆಯಲ್ಲಿ ಬೇಸಿಗೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆಯಾಗದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಹಾಗೂ ಸಹಕಾರ ಇಲಾಖೆಯ ಮುಖ್ಯ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಸೂಚನೆ ನೀಡಿದರು.

ಸೋಮವಾರ ಜಿಲ್ಲಾಡಳಿತ ತುಂಗಭದ್ರಾ ಸಭಾಂಗಣದಲ್ಲಿ ಬೇಸಿಗೆ ಕುಡಿಯುವ ನೀರು ಹಾಗೂ ಇತರೆ ಪ್ರಗತಿ ಪರಿಶೀಲನೆ ನಡೆಸಿದ ಅವರು, ಚುನಾವಣಾ ಸಂದರ್ಭವಾಗಿರುವುದರಿಂದ ಯಾವುದೇ ಅಧಿಕಾರಿಗಳು ಕೇಂದ್ರ ಸ್ಥಾನ ಬಿಡದಂತೆ ಹಾಗೂ ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಸಲಹೆ ನೀಡಿದರು.

ಜಿಲ್ಲೆಯಲ್ಲಿ ಡಿಸೆಂಬರ್ ಉತ್ತಮ ಮಳೆಯಾಗಿದೆ. ಕೆರೆ, ಕಟ್ಟೆ ತುಂಬಿವೆ.ಸದ್ಯದಲ್ಲಿ ನೀರಿನ ಅಭಾವ ಇರುವುದಿಲ್ಲ. ಆದ್ಯಾಗೂ ಮುನ್ನೆಚರಿಕೆ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಈ ವೇಳೆ ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಹಿಟ್ನಾಳ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ವಾಸಂತಿ ಉಪ್ಪಾರ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ, ಡಿ.ಡಿ.ಪಿ.ಐ. ತಿಪ್ಪೇಶಪ್ಪ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

# ಪುಣ್ಯಾನಂದಪುರಿ ಶ್ರೀಗಳ ಪರಿಶ್ರಮದಿಂದ ಸಮಾಜಕ್ಕೆ ಶಕ್ತಿ ಬಂದಿದೆ

### ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿಯವರ 16ನೇ ವರ್ಷದ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಶ್ಲಾಘನೆ



ಮಲೇಬೆನ್ನೂರು, ಏ.3- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಪ್ರಥಮ ಪೀಠಾಧಿಪತಿಯಾಗಿದ್ದ ಲಿಂಗೈಕ್ಯ ಜಗದ್ಗುರು ಶ್ರೀ ಪುಣ್ಯಾನಂದ ಪುರಿ ಸ್ವಾಮೀಜಿಯವರ 16ನೇ ವರ್ಷದ ಪುಣ್ಯಾರಾಧನೆಯನ್ನು ವಿವಿಧೆಡೆ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದಲ್ಲಿರುವ ಶ್ರೀ ಪುಣ್ಯಾನಂದ ಪುರಿ ಶ್ರೀಗಳವರ ಗದ್ದುಗೆಗೆ ವಿಶೇಷ ಅಲಂಕಾರ ಮಾಡಿ, ವಿಶೇಷ ಪೂಜೆ ಸಲ್ಲಿಸುವ ಮೂಲಕ ಅವರಿಗೆ ಗೌರವ ನಮನ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ, ಪುಣ್ಯಾನಂದ ಪುರಿ ಶ್ರೀಗಳ ಸತತ ಪರಿಶ್ರಮದಿಂದಾಗಿ ವಾಲ್ಮೀಕಿ-ನಾಯಕ ಸಮಾಜ ಇವತ್ತು ಒಟ್ಟಾರೆ ಸಮಾಜದಲ್ಲಿ ತನ್ನದೇ ಆದ ಸ್ಥಾನ ಪಡೆದುಕೊಂಡಿದೆ. ಶ್ರೀಗಳಿಂದಾಗಿ ಸಮಾಜಕ್ಕೆ ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಶಕ್ತಿ ಸಿಕ್ಕಿದೆ. ನಿಮ್ಮ ವೈಯಕ್ತಿಕ ವಿಚಾರಗಳು ಏನೇ ಇರಲಿ. ಸಮಾಜದ ವಿಷಯ ಬಂದಾಗ ಎಲ್ಲರೂ ಒಗ್ಗಟ್ಟಾಗುವ ಮೂಲಕ ಪುಣ್ಯಾನಂದ ಪುರಿ ಶ್ರೀಗಳ ಪರಿಶ್ರಮಕ್ಕೆ ಮನ್ನಣೆ ನೀಡಬೇಕೆಂದು ಸಮಾಜದ ಬಂಧುಗಳಿಗೆ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮನವಿ ಮಾಡಿದರು. ಕಷ್ಟ ಕಾಲದಲ್ಲಿ ಸಮಾಜದ ಪ್ರಥಮ ಗುರುಗಳಾಗಿ ಸಮಾಜವನ್ನು ಸಂಘಟಿಸಿದ ಕೀರ್ತಿ ಪುಣ್ಯಾನಂದ ಪುರಿ ಶ್ರೀಗಳಿಗೆ ಸಲ್ಲುತ್ತದೆ ಎಂದರು.

ಶಾಸಕ ಎಸ್. ರಾಮಪ್ಪ, ಮಠದ ಆಡಳಿತಾಧಿಕಾರಿ ಟಿ. ಓಬಳಪ್ಪ, ಧರ್ಮದರ್ಶಿಗಳಾದ ನಲುವಾಗಲು ನಾಗರಾಜಪ್ಪ, ಕೆ.ಬಿ. ಮಂಜಣ್ಣ, ಹರ್ತಿಕೋಟೆ ವೀರೇಂದ್ರ ಸಿಂಹ, ಹಾಸನದ ಮಹೇಶ್, ನಿವೃತ್ತ ಎಸಿಪಿ ಪಂಪಾಪತಿ, ಬಿಜೆಪಿ ಮುಖಂಡ ಕೂಡ್ಲಿಗಿಯ ಬಂಗಾರಿ ಹನುಮಂತು, ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿವೃತ್ತ ಶಿಕ್ಷಕ ಭಾನುವಳ್ಳಿ ಪುಟ್ಟಪ್ಪ, ಜಿಗಳಿ ಕ್ಯಾಂಪಿನ ಎನ್. ಪ್ರಸಾದ್‌ರಾವ್, ತಾ. ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪಾರ್ವತಿ ಬೋರಯ್ಯ, ಜಿಲ್ಲಾ ವಾಲ್ಮೀಕಿ ಮಹಿಳಾ ಸಂಘದ ಶ್ರೀಮತಿ ವಿಜಯಶ್ರೀ ಮಹೇಂದ್ರಕುಮಾರ್, ಹರಿಹರದ ಮಕರಿ ಪಾಲಾಕ್ಷಪ್ಪ, ರಾಜನಹಳ್ಳಿ ಭೀಮಣ್ಣ, ಪುಣ್ಯಾನಂದ ಪುರಿ ಶ್ರೀಗಳ ಪ್ರತಿಮೆಯ ದಾನಿಗಳಾದ ಶ್ರೀಮತಿ ಸುಮಿತ್ರ ಕೆ.ಹೆಚ್. ಓಬಳಪ್ಪ ಪುತ್ರರಾದ ಚೇತನ್ ಸಚ್ಚಿನ್, ಪತ್ರಕರ್ತ ಜಿಗಳಿ ಪ್ರಕಾಶ್ ಸೇರಿದಂತೆ ವಿವಿಧ ತಾಲ್ಲೂಕಿನ ಭಕ್ತರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವ



70ನೇ ವರ್ಷದ ಶ್ರೀ ಮಹಾವೀರ ಜನ್ಮ ಕಲ್ಯಾಣ ಮಹೋತ್ಸವ, 2622ನೇ ಜಯಂತ್ಯೋತ್ಸವವನ್ನು ಎನ್.ಆರ್. ರಸ್ತೆಯಲ್ಲಿರುವ 1008 ಶ್ರೀ ಪಾರ್ಶ್ವನಾಥ ಜೈನ ಮಂದಿರದಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 7.30 ರಿಂದ 9ರವರೆಗೆ 108 ಕಲಶ ಅಭಿಷೇಕ, ಜಲಾಭಿಷೇಕ, ಗಂಧಾಭಿಷೇಕ, ಕ್ಷೀರಾಭಿಷೇಕ, ಕಬ್ಬಿನ ಹಾಲಿನ ಅಭಿಷೇಕ, ಎಳನೀರು ಅಭಿಷೇಕ, ಮಾವಿನ ಹಣ್ಣಿನ ಅಭಿಷೇಕ, ಚತುಷ್ಕೋನ ಅಭಿಷೇಕ, (ಈಶಾನ್ಯ, ನೈರುತ್ಯ, ವಾಯುವ್ಯ, ಆಗ್ನೇಯ) ಶಾಂತಿಧಾರ ಅಭಿಷೇಕಗಳು ನಡೆಯಲಿವೆ.

ಬೆಳಿಗ್ಗೆ 10.30 ರಿಂದ 1 ರವರೆಗೆ ಮಹಾವೀರ ತೀರ್ಥಂಕರರ ಭವ್ಯ ಮೆರವಣಿಗೆಯು ಶ್ರೀ ಪಾರ್ಶ್ವನಾಥ ಜಿನ ಮಂದಿರದಿಂದ ಪ್ರಾರಂಭಗೊಳ್ಳಲಿದೆ. ಮಧ್ಯಾಹ್ನ 1.30 ರಿಂದ ಜನ ಸಮಾಜದ ವತಿಯಿಂದ ಭೋಜನ, ಮಧ್ಯಾಹ್ನ 3.30 ಕ್ಕೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಸಂಜೆ 7ಕ್ಕೆ ಪದ್ಮಾಂಬ ಮಹಿಳಾ ಸಮಾಜದಿಂದ ಮಹಾವೀರ ತೀರ್ಥಂಕರರ ಬಾಲ ಲೀಲೋತ್ಸವ, ನಾಮಕರಣ ಹಾಗೂ ತೊಟ್ಟಿಲು ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಮಹಾವೀರ್ ಯುವ ಮಂಚ್ ಪದಾಧಿಕಾರಿಗಳು ತಿಳಿಸಿದ್ದಾರೆ.

## ನಗರದ 19, 20ನೇ ವಾರ್ಡ್‌ಗಳಲ್ಲಿ ಇಂದು ಎಸ್ಸೆಸ್ ಪ್ರಚಾರ

19 ಮತ್ತು 20 ವಾರ್ಡ್ ಭಾರತ್ ಕಾಲೋನಿ, ಅಣ್ಣಾ ನಗರ, ಕಬ್ಬೂರ್ ಬಸಪ್ಪ ನಗರ, ಹೆಚ್.ಕೆ.ಆರ್. ನಗರ, ಶೇಖರಪ್ಪ ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿ ಶಾಮನೂರು ಶಿವಶಂಕರಪ್ಪ ಅವರಿಂದ ಇಂದು ಬೆಳಿಗ್ಗೆ 9-30 ಗಂಟೆಯಿಂದ ಭಾರತ್ ಕಾಲೋನಿಯ ಗಣೇಶ ಹೋಟೆಲ್ ನಿಂದ ಆರಂಭಗೊಳ್ಳಲಿದೆ.

ಕಾಂಗ್ರೆಸ್ ಅಧ್ಯಕ್ಷ ಅಯೂಬ್, ಪಾಲಿಕೆ ಸದಸ್ಯರಾದ ಶ್ರೀಮತಿ ಮೀನಾಕ್ಷಿ ಜಗದೀಶ್ ಮತ್ತು ಇತರರು ಪ್ರಚಾರ ಸಭೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

## ನಗರದಲ್ಲಿ ಇಂದಿನಿಂದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ

ಕ್ರಿಕೆಟ್ ಅಕಾಡೆಮಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಸತತ 22ನೇ ವರ್ಷದ ಬೇಸಿಗೆ ಕ್ರಿಕೆಟ್ ತರಬೇತಿ ಶಿಬಿರ ಜಿಲ್ಲಾ ಕ್ರೀಡಾಂಗಣದಲ್ಲಿ ಹಾಗೂ ಹೈಸ್ಕೂಲ್ ಮೈದಾನದಲ್ಲಿ ಇಂದಿನಿಂದ ಪ್ರಾರಂಭವಾಗಲಿದೆ. ಶಿಬಿರದಲ್ಲಿ ಫಿಟ್ನೆಸ್ ಬಗ್ಗೆಯೂ ಹೇಳಿಕೊಡಲಾಗುವುದು. ಶಿಬಿರದ ಮಧ್ಯದಲ್ಲಿ ಬೇರೆ ಜಿಲ್ಲೆಗಳ ಕ್ರಿಕೆಟ್ ತಂಡದ ವಿರುದ್ಧ ಪಂದ್ಯಗಳನ್ನು ಕೂಡ ಆಯೋಜಿಸಲಾಗಿದೆ. ವಿವರಗಳಿಗೆ ತರಬೇತಿ ಶಿಬಿರದ ಆಯೋಜಕರಾದ ಗುರುದೇವ್ ಅಂಬರ್ಕರ್ (9964599160), ಗೋಪಾಲಕೃಷ್ಣ (7899610318), ತಿಮ್ಮೇಶ್ (9880440602) ಅವರನ್ನು ಸಂಪರ್ಕಿಸಬಹುದು.

# ಭವಿಷ್ಯದ ಜಗತ್ತು ಮುಕ್ತ ಮಾರುಕಟ್ಟೆಯ ಮುಂಗಟ್ಟಿನಂತಾಗಲಿದೆ

### ಬಾಪೂಜಿ ಹೈಟೆಕ್ ಕಾಲೇಜಿನ ಬಿ.ಕಾಂ. ಪದವಿ ಪ್ರದಾನ ಸಮಾರಂಭದಲ್ಲಿ ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್



ದಾವಣಗೆರೆ, ಏ.3- ಜಾಗತಿಕ ಮಾರುಕಟ್ಟೆಯಲ್ಲಿ ಮೇಲುಗೈ ಸಾಧಿಸಲು ವಿಶ್ವದ ಅನೇಕ ದೇಶಗಳಲ್ಲಿ ಪೈಪೋಟಿ ಇದ್ದು, ನಿಯಂತ್ರಿತ ಅಥವಾ ರಕ್ಷಣಾತ್ಮಕ ವ್ಯವಸ್ಥೆಯಲ್ಲಿ ಇದಕ್ಕೆ ಅವಕಾಶ ಕಡಿಮೆ ಎಂಬುದು ಅರಿವಾಗಿದ್ದು, ಭವಿಷ್ಯದ ಜಗತ್ತು ಮುಕ್ತ ಮಾರುಕಟ್ಟೆಯ ಮುಂಗಟ್ಟಿನಂತಾಗಲಿದೆ ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಅಭಿಪ್ರಾಯ ಪಟ್ಟರು.

ನಗರದ ಬಾಪೂಜಿ ಹೈಟೆಕ್ ಎಜುಕೇಷನ್‌ನ ಬಿಕಾಂ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ವಾಣಿಜ್ಯಶಾಸ್ತ್ರವು ವ್ಯಾಪಾರೋದ್ಯಮ, ಲೆಕ್ಕಪತ್ರ, ಅಂಕಿ - ಅಂಶ, ಆರ್ಥಿಕ ತತ್ವಗಳು, ತೆರಿಗೆ ವಿಧಾನ, ವಿಮೆ, ಮಾರುಕಟ್ಟೆ ಹಾಗೂ ಕಾನೂನು ಕಾಯ್ದೆಗಳು ಎಲ್ಲಾ ವಿಷಯಗಳನ್ನೂ ಒಳಗೊಂಡಂತಿದ್ದು, ಬಿಕಾಂ ಪದವಿಗೆ ಹೆಚ್ಚು ಬೇಡಿಕೆ ಇದೆ. ಭಾರತದಲ್ಲಿ ಪ್ರತಿವರ್ಷ ಹೊರಬರುವ ಸಾಮಾನ್ಯ ಪದವೀಧರರುಗಳಲ್ಲಿ ಶೇ.70 ರಷ್ಟು ಬಿಕಾಂ ಪದವೀಧರರೇ ಆಗಿರುತ್ತಾರೆ. ದೇಶದ 962 ವಿಶ್ವವಿದ್ಯಾನಿಲಯಗಳ ಸುಮಾರು 38200 ಕಾಲೇಜುಗುಳಿಂದ ಪ್ರತಿ ವರ್ಷ ಕನಿಷ್ಠ ನಾಲ್ಕು ಲಕ್ಷ ಬಿಕಾಂ ಪದವೀಧರರು ಹೊರ ಬರುತ್ತಿದ್ದು, ಸ್ವ-ಉದ್ಯೋಗ ಮಾಡಲಿಕ್ಕಾಗಲೀ ಅಥವಾ ಉದ್ಯೋಗಿಗಳಾಗಿ ಹೋಗಲಿಕ್ಕಾಗಲೀ ಈ ಶಿಕ್ಷಣ ಅನುಕೂಲಕರವಾಗಿದೆ. ಭಾರತವು ವಿಶ್ವದ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವಲ್ಲಿ ವಾಣಿಜ್ಯಶಾಸ್ತ್ರ ಪದವೀಧರ ಜವಾಬ್ದಾರಿಯೂ ಮಹತ್ವದ್ದಾಗಿದೆ ಎಂದರು.

'ಅಭಿವೃದ್ಧಿಶೀಲ ರಾಷ್ಟ್ರ'ವೆಂಬ ದೀರ್ಘಕಾಲದ ಹಣೆ ಪಟ್ಟಿಯಿಂದ ಭಾರತವು 'ಅಭಿವೃದ್ಧಿ ಹೊಂದಿದ ರಾಷ್ಟ್ರ' ಎಂಬ ಹೆಗ್ಗಳಿಕೆಗೆ ದಾಪುಗಾಲುಡುತ್ತಿದ್ದು, ವಿಶ್ವದ ವಾಣಿಜ್ಯಾತ್ಮಕ ವ್ಯವಸ್ಥೆಯು ಭಾರತದ ಹಿಡಿತಕ್ಕೆ ಬರುವ ಕಾಲ ದೂರವಿಲ್ಲ. ಇದಕ್ಕಾಗಿ ನಮ್ಮ ವಾಣಿಜ್ಯ ಶಾಸ್ತ್ರ ಪದವೀಧರ ವಿದ್ಯಾರ್ಥಿಗಳು ಪ್ರಯತ್ನಶೀಲತೆಯಿಂದ ಈ ಅವಕಾಶದ ಸದುಪಯೋಗ ಪಡಿಸಿಕೊಂಡು ಭಾರತದ ಕೀರ್ತಿಯನ್ನು ಉತ್ತುಂಗಕ್ಕೇರಿಸಬೇಕಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ. ಬಿ ವೀರಪ್ಪ ಅವರು ಮಾತನಾಡಿ, ಒಂದೇ ಪದವಿಗೆ ತೃಪ್ತರಾಗಿ ಉದ್ಯೋಗ ಅರಸಿಕೊಂಡು ಹೋಗುವ ಬದಲು ಇನ್ನಷ್ಟು ಪದವಿಗಳನ್ನು ಪಡೆದು ಜ್ಞಾನಿಗಳಾಗಿ ಸ್ವಉದ್ಯೋಗದ ಕಡೆಗೆ ಗಮನ ಕೊಡಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕಾಲೇಜಿನ ನಿರ್ದೇಶಕ ಡಾ.ಸ್ವಾಮಿ ತ್ರಿಭುವನಾನಂದ ಪ್ರಾಸ್ತಾವಿಕ ಮಾತುಗಳೊಂದಿಗೆ ಸ್ವಾಗತಿದರು. ಶೈಕ್ಷಣಿಕ ವರದಿಯನ್ನು ಪ್ರೊ. ಬಿ.ವಿ. ಶ್ವೇತಾ ವಾಚಿಸಿದರು. ಪ್ರೊ. ಹೆಚ್.ಎಸ್.ವೀಣಾ ಹಾಗೂ ಪ್ರೊ. ಎಂ. ಎಸ್.ನಾಗರಾಜ್ ಅತಿಥಿಗಳ ಪರಿಚಯ ಮಾಡಿದರು. ಪ್ರತಿಭಾ ಪುರಸ್ಕೃತರ ಹಾಗೂ ಪದವೀಧರರ ನಾಮಘೋಷಣೆಗಳನ್ನು ಪ್ರೊ. ಡಿ.ಪಿ. ನಿಶಾರಾಣಿ ಹಾಗೂ ಪ್ರೊ. ಓ.ಹೆಚ್. ಲತಾ ಮಾಡಿದರೆ ಪದವೀಧರರಿಗೆ ಪ್ರಮಾಣ ವಚನವನ್ನು ಪ್ರೊ. ಆರ್.ಎಸ್.ಜ್ಞಾನೇಶ್ವರ ಬೋಧಿಸಿದರು. ಪ್ರೊ. ಬಿ.ಬಿ.ಮಂಜುನಾಥ್ ವಂದನೆಗಳನ್ನು ಸಮರ್ಪಿಸಿದರು.

## ದಕ್ಷಿಣಕ್ಕೆ ಬಿಜೆಪಿ ಟಿಕೆಟ್ ನೀಡುವಂತೆ ಉಮಾ ಪ್ರಕಾಶ್ ಮನವಿ



ದಾವಣಗೆರೆ, ಏ. 3 - ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತನಗೆ ಬಿಜೆಪಿ ಟಿಕೆಟ್ ನೀಡಬೇಕು ಎಂದು ಮಹಾನಗರ ಪಾಲಿಕೆ ಮಾಜಿ ಮೇಯರ್ ಹಾಗೂ ಹಾಲಿ ಸದಸ್ಯೆ ಶ್ರೀಮತಿ ಉಮಾ ಪ್ರಕಾಶ್ ಅವರು ಬಿಜೆಪಿ ರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾಧ್ಯಕ್ಷರಿಗೆ ಅರ್ಜಿ ಸಲ್ಲಿಸಿದ್ದಾರೆ.

ದಕ್ಷಿಣ ಕ್ಷೇತ್ರದಲ್ಲಿ ಓಬಿಸಿ ಆಧಾರದಲ್ಲಿ ಟಿಕೆಟ್ ನೀಡುವುದಾದರೆ ತಮಗೆ ನೀಡಿ, ಮಹಿಳೆಯರಿಗೆ ಪ್ರಾತಿನಿಧ್ಯ ಕೊಟ್ಟಂತಾಗುತ್ತದೆ. ಕಳೆದ 20 ವರ್ಷಗಳಿಂದಲೂ ಪಕ್ಷಕ್ಕಾಗಿ ದುಡಿದಿದ್ದೇನೆ ಎಂದು ಅವರು ತಿಳಿಸಿದ್ದಾರೆ.

2007 ರಲ್ಲಿ ಬಿಜೆಪಿಯಿಂದ ಮಹಾನಗರ ಪಾಲಿಕೆ ಚುನಾವಣೆಗೆ ಸ್ಪರ್ಧಿಸಿ ಜಯ ಗಳಿಸಿ ಮಹಾಪೌರರಾಗಿ ಕಾರ್ಯ ನಿರ್ವಹಿಸಿದ್ದೇನೆ. 2019 ರಲ್ಲಿ ನಡೆದ ಪಾಲಿಕೆ ಚುನಾವಣೆಯಲ್ಲಿ ಸ್ಪರ್ಧಿಸಿ ಎರಡನೇ ಬಾರಿ ಆಯ್ಕೆಯಾಗಿದ್ದೇನೆ. ಯೋಜನೆ ಮತ್ತು ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಅನುಭವ ಹೊಂದಿದ್ದೇನೆ ಎಂದು ಅವರು ವರಿಷ್ಠರಿಗೆ ಸಲ್ಲಿಸಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.

## ಬಸವಾಪಟ್ಟಣ ಶ್ರೀ ದುರುಗಮ್ಮ ದೇವಿ ಎಡೆಜಾತ್ರೆ ಮಹೋತ್ಸವ

ದಾವಣಗೆರೆಯ ಬೇತೂರು ರಸ್ತೆಯಲ್ಲಿರುವ ಶ್ರೀ ದುರುಗಮ್ಮ ದೇವಸ್ಥಾನ ಸಮಿತಿಯಿಂದ ಇಂದಿನಿಂದ ಇದೇ ದಿನಾಂಕ 8ರವರೆಗೆ ಬಸವಾಪಟ್ಟಣ ಶ್ರೀ ದುರುಗಮ್ಮದೇವಿ ಎಡೆಜಾತ್ರೆ ಮಹೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ. ಇಂದು ಶ್ರೀ ದೇವಿಗೆ ಅಭಿಷೇಕ, ಮಹಾಮಂಗಳಾರತಿ ಮತ್ತು ಪೂಜೆ ನಡೆಯಲಿದೆ. ನಾಳೆ ಮಂಗಳವಾರ ಶ್ರೀ ದೇವಿಯ ಪೂಜಾ ಸಮಾರಂಭದ ಜೊತೆಗೆ ಅಲಂಕೃತ ಮಂಟಪದಲ್ಲಿ ವಾದ್ಯಗಳೊಂದಿಗೆ ದೇವಿ ಮೆರವಣಿಗೆ ನಡೆಯಲಿದೆ. ಏ.5ರಂದು ದೇವಿಗೆ ಹರಕೆ, ಮುಡಪು ಒಪ್ಪಿಸುವ ಕಾರ್ಯಕ್ರಮ ಇರುತ್ತದೆ.

ಏ.7 ಮತ್ತು 8ರಂದು ಎರಡು ದಿನಗಳ ಕಾಲ ರಾಜ್ಯ ಹಾಗೂ ರಾಷ್ಟ್ರಮಟ್ಟದ ಮುಕ್ತ ಬಯಲು ಜಂಗೀ ಕುಸ್ತಿ ಸ್ಪರ್ಧೆಗಳನ್ನು ಬೇತೂರು ರಸ್ತೆಯಲ್ಲಿರುವ ಕೊರಚರ ಕಾಲೋನಿಯಲ್ಲಿ ಏರ್ಪಡಿಸಲಾಗಿದೆ. ಈ ಕುಸ್ತಿಯಲ್ಲಿ ಗೆದ್ದ ಪೈಲ್ವಾನರಿಗೆ ಪ್ರಶಸ್ತಿಗಳ ಜೊತೆಗೆ ನಗದು ಬಹುಮಾನ ಬೆಳ್ಳಿ ಗದೆ, ಬಂಗಾರದ ಪದಕಗಳನ್ನು ನೀಡಲಾಗುತ್ತದೆ ಎಂದು ದಾವಣಗೆರೆ ತಾಲ್ಲೂಕು ಕೊರಚರ ಸಂಘ ತಿಳಿಸಿದೆ.

### ಓದುಗರ ಪತ್ರ

## ಬೀದಿ ಭಿಕ್ಷುಕರ ಕಿರಿ ಕಿರಿ ತಪ್ಪಿಸಿ..!

ಮಾನ್ಯರೇ,

ಮಹಾನಗರ ಪಾಲಿಕೆ ಎದುರುಗಡೆ ಇರುವ ಕೆಳ ಸೇತುವೆ ಪಾದಚಾರಿಗಳ ಕಿರುದಾರಿಯಲ್ಲಿ ಬಿಎಸ್‌ಎನ್‌ಎಲ್ ಕಛೇರಿ ಬಳಿ ಸುಮಾರು ವರ್ಷಗಳಿಂದ ಬೀದಿ ಭಿಕ್ಷುಕರು ದಾರಿಹೋಕರಿಗೆ ಕಿರಿಕಿರಿ ಮಾಡುತ್ತಿರುತ್ತಾರೆ. ಸರ್ಕಾರವು ಭಿಕ್ಷಾಟನೆಯನ್ನು ನಿಷೇಧಿಸಿದ್ದರೂ ಈ ಭಿಕ್ಷುಕರಿಂದ ಕಿರಿಕಿರಿ ಎನಿಸಿದೆ. ಈ ಸಂಬಂಧ ಬಸವನಗರ ಪೊಲೀಸ್ ಠಾಣೆಗೆ ತಿಳಿಸಿದರೂ ಪ್ರಯೋಜನವಾಗಿಲ್ಲ. ಭಿಕ್ಷುಕರ ಪುನರ್ ವಸತಿ ಕೇಂದ್ರಗಳಲ್ಲಿ ಅವರಿಗೆ ಅನ್ನ, ಆಶ್ರಯ ಮತ್ತು ಭವಿಷ್ಯ ನೀಡಿದಂತೆ ಇಲ್ಲಿನ ಭಿಕ್ಷುಕರಿಗೆ ಪುನರ್ ವಸತಿ ಕಲ್ಪಿಸಬೇಕು. ಅಲ್ಲದೇ ಪಿಬಿ ರಸ್ತೆಯಲ್ಲಿರುವ ಶನೀಶ್ವರ ದೇವಸ್ಥಾನದ ಬಳಿ ಇರುವ ಭಿಕ್ಷುಕರನ್ನು ಖಾಯಂ ಆಗಿ ಆ ಸ್ಥಳಗಳಿಂದ ತೆರವುಗೊಳಿಸಬೇಕು.

**-ಜೆ.ಎಸ್.ಚಂದ್ರನಾಥ,** ನೀಲಾನಹಳ್ಳಿ.

## ಜಿಲ್ಲೆಯಲ್ಲಿ 16 ಜನರಿಗೆ ಕೋವಿಡ್

ದಾವಣಗೆರೆ, ಏ. 3- ಜಿಲ್ಲೆಯಲ್ಲಿ ಸೋಮವಾರ 16 ಜನರಲ್ಲಿ ಕೊರೊನಾ ಸೋಂಕು ಕಾಣಿಸಿ ಕೊಂಡಿದೆ. ಜಗಳೂರು ತಾಲ್ಲೂಕಿ ನಲ್ಲಿಯೇ ಈ ದಿನ 14 ಜನರಲ್ಲಿ ಕೋವಿಡ್ ಸೋಂಕು ದೃಢ ಪಟ್ಟಿದೆ. ಕಳೆದ ವಾರ ಜಗಳೂರು ತಾಲ್ಲೂಕಿನಲ್ಲಿ ಐವರಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಅವರ ಸಂಪರ್ಕಿತರನ್ನು ಪರೀಕ್ಷೆ ಮಾಡಲಾಗಿದ್ದು, ಇಂದು 14 ಜನರಲ್ಲಿ ಸೋಂಕು ಕಾಣಿಸಿದೆ. ಎಲ್ಲರೂ ಹೋಂ ಐಸೋಲೇಷನ್ ನಲ್ಲಿದ್ದಾರೆ. ದಾವಣಗೆರೆಯಲ್ಲಿ 1 ಹಾಗೂ ಹೊರ ಜಿಲ್ಲೆಯ ಒಬ್ಬರಲ್ಲೂ ಸೋಂಕು ದೃಢಪಟ್ಟಿದೆ.

## ನಗರದಲ್ಲಿ ಇಂದು ಮಕ್ಕಳ ಶಿಬಿರ

ಜಿಲ್ಲಾ ಶಿಶು ಕಲ್ಯಾಣ ಮಂಡಳಿ ವತಿಯಿಂದ ನಗರದ ವನಿತಾ ಸಮಾಜದಲ್ಲಿ ಇಂದಿನಿಂದ ಇದೇ ದಿನಾಂಕ 13 ರವರೆಗೆ ಪ್ರತಿ ದಿನ ಬೆಳಿಗ್ಗೆ 9.30 ರಿಂದ 11.30 ರವರೆಗೆ ಮಕ್ಕಳ ಬೇಸಿಗೆ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ.

ವಿವರಕ್ಕೆ ಉಷಾ ರಂಗನಾಥ (9986520989), ಸುನೀತಾ ಇಂದೂಧರ (9945056060) ಅವರನ್ನು ಸಂಪರ್ಕಿಸಬಹುದು.

## ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಿಂದ ಉಚಿತ ಮಜ್ಜಿಗೆ, ನೀರು ವಿತರಣೆ

ದಾವಣಗೆರೆ, ಏ. 3- ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಇದೇ ದಿನಾಂಕ 6 ರಿಂದ ಮೇ 6 ರವರೆಗೆ ಒಂದು ತಿಂಗಳ ಕಾಲ ಮಜ್ಜಿಗೆ ಮತ್ತು ನೀರು ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಶಿವನಕೆರೆ ಬಸವಲಿಂಗಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಬಿಸಿಲಿನ ತಾಪದಿಂದ ಬಳಲಿದ ಸಾರ್ವಜನಿಕರಿಗೆ ದಾಹ ತೀರಿಸುವ ನಿಟ್ಟಿನಲ್ಲಿ ಸತತವಾಗಿ ಕಳೆದ ಆರು ವರ್ಷಗಳಿಂದ ನಗರದ ವಿವಿಧ ಕಡೆಗಳಲ್ಲಿ ಮಜ್ಜಿಗೆ, ನೀರನ್ನು ವಿತರಿಸಲಾಗುತ್ತಿದೆ ಎಂದರು. ನಗರದ ಜಯದೇವ ವೃತ್ತ, ಚಿಗಟೇರಿ ಜಿಲ್ಲಾಸ್ಪತ್ರೆ, ಕೆ.ಆರ್. ಮಾರ್ಕೆಟ್ (ಹೆರಿಗೆ ಆಸ್ಪತ್ರೆ), ರಾಮ್ ಅಂಡ್ ಕೋ ವೃತ್ತದಲ್ಲಿ ನೀರು ಹಾಗೂ ಮಜ್ಜಿಗೆ ವಿತರಣೆ ಮಾಡಲಾಗುವುದು. ಜೊತೆಗೆ ಜ್ಞಾನ ದಾಸೋಹಕ್ಕಾಗಿ ಕೆಲವು ಪುಸ್ತಕಗಳು, ಪೋಸ್ಟರ್‌ಗಳನ್ನೂ ಸಹ ನೀಡಲಾಗುತ್ತದೆ ಎಂದು ಹೇಳಿದರು.

ದಾನಿಗಳು ನಗರದ ನಾಲ್ಕು ಕಡೆಗಳಲ್ಲಿ ಒಂದು ದಿನ ನೀರು ಮತ್ತು ಮಜ್ಜಿಗೆ ವಿತರಣೆಗಾಗಿ 6000 ಹಾಗೂ ಒಂದೇ ಕಡೆ ಒಂದು ದಿನ ವಿತರಣೆಗೆ 1500 ರೂ.ಗಳನ್ನು ನೀಡಬೇಕಾಗುತ್ತದೆ. ದಾನಿಗಳೇ ನೇರವಾಗಿ ಖರ್ಚು ಭರಿಸಬಹುದು ಅಥವಾ ತಮಗೆ ತೋಚಿದಷ್ಟು ಧನ ಸಹಾಯವನ್ನೂ ಸಹ ಮಾಡಬಹುದು ಎಂದು ತಿಳಿಸಿದರು. ದಾನಿಗಳು ಕರುಣಾ ಜೀವ ಕಲ್ಯಾಣ ಟ್ರಸ್ಟ್ ದಾವಣಗೆರೆ ಇವರ ಬ್ಯಾಂಕ್ ಖಾತೆ ಸಂಖ್ಯೆ: 50100332805356, ಐಎಫ್‌ಎಸ್‌ಸಿ ಕೋಡ್: 0000403 ಗೆ ಧನಸಹಾಯ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ9110455199, 9538024422 ಗೆ ಸಂಪರ್ಕಿಸಲು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಪದಾಧಿಕಾರಿಗಳಾದ ಶ್ರೀಮತಿ ಮಂಜುಳಾ ಬಸವಲಿಂಗಪ್ಪ, ಪ್ರೊ. ಎಂ. ಬಸವರಾಜ್, ಎಂ.ಬಿ. ಮಧುಸೂದನ ಉಪಸ್ಥಿತರಿದ್ದರು.


**VACANCY**

| Sl. No. | Job Title | No Of Openings | Educational Qualification | Experience No of Years |
|---|---|---|---|---|
| 01 | Accountants (Junior) | 10 | B.Com / M.Com / MBA FICO / SAP | 0-1 |
| 02 | Accounts (Senior) | 05 | Bcom / Mcom / MBA GST / INCOME TAX / SAP / FICO | 5 |
| 03 | Sales Executives for marketing retail & Project. with 2-wheeler | 10 | Any Degree (Diploma/ITI) | 0-1 |


**HULLUMANE PROPERTIES & POWER PVT LTD.,**
# Depot Address - L 13, Lokikere Industrial Area
Davangere-577 005. Karnataka
**Drop Resume to Email - hrhullumanepropertiespwr@yahoo.com**

**ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ (ರಿ)**
#4198, 4ನೇ ಮೇನ್, 14ನೇ ಕ್ರಾಸ್, ಎಸ್.ಎಸ್. ಬಡಾವಣೆ, 'ಬಿ' ಬ್ಲಾಕ್, ದಾವಣಗೆರೆ
**ಬ್ಯಾಡ್ಮಿಂಟನ್ ಕ್ರೀಡೆಯ ಬೇಸಿಗೆ ತರಬೇತಿ ಶಿಬಿರ**
**ಸಮ್ಮರ್ ಕ್ಯಾಂಪ್**
1ನೇ ಬ್ಯಾಚ್ : ದಿನಾಂಕ : 5.04.2023 ರಿಂದ 29.4.2023
2ನೇ ಬ್ಯಾಚ್ : ದಿನಾಂಕ 1.5.2023 ರಿಂದ 29.5.2023
ಸಮಯ : ಬೆಳಿಗ್ಗೆ 11 ರಿಂದ 12.30ರವರೆಗೆ ಮಧ್ಯಾಹ್ನ 12.30 ರಿಂದ 1.30ರವರೆಗೆ
ಸ್ಥಳ : ನೇತಾಜಿ ಸುಭಾಷ್ ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣ ಎಸ್.ಎಸ್. ಬಡಾವಣೆ, ಬಿ ಬ್ಲಾಕ್, ದಾವಣಗೆರೆ.
ಹೆಸರು ನೋಂದಾಯಿಸಲು ಮಾಹಿತಿಗಾಗಿ ಸಂಪರ್ಕಿಸಿ :
ಮೊಬೈಲ್ : 99862 22140, 91104 77598

**BUSSINESS Opportunity** TATA
Age limit - 35 to 60 Years. Work from anywhere in India
ಹಿರಿಯ ನಾಗರಿಕರಿಗೆ ಮತ್ತು ನಿವೃತ್ತಿ ಹೊಂದಿದವರಿಗೆ ಹಾಗೂ ಮಹಿಳೆಯವರಿಗೆ ವಿಶೇಷ ಆಹ್ವಾನ
**NEW BRANCH OPENED @ DAVANAGERE.**



- Enjoy unlimited earning opportunity
- Work from home / Part Time/ Full time or consulting Basis
- Zero intial capital investment
- Travel abroad to our conventions
- with Fixed salary Medical Benefits and incentives



No Registration Fee
Limited Seat Only
*Start your Journey from home maker to Business women*
*Start your second Innings of your life with a unique business opportunity*
Now you can earn an income even if you are retired, here is your unique opportunity to be self-reliant
**ಸುವರ್ಣಾವಕಾಶ**
ಹಿರಿಯ ನಾಗರಿಕರಿಗೆ, ಉದ್ಯಮಿಗಳಿಗೆ/ ಅನಿವಾಸಿ ಭಾರತೀಯರಿಗೆ/ಗೃಹಿಣಿಯರಿಗೆ ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ, ಖಾಸಗಿ ನೌಕರರು / ಶಿಕ್ಷಕರು / ವೈದ್ಯರು / ವಕೀಲರು / ನಿವೃತ್ತ ಬ್ಯಾಂಕ್ ನೌಕರರು ಮತ್ತು ಮಾಜಿ ರಕ್ಷಣಾಧಿಕಾರಿ ಇದೊಂದು ಸುವರ್ಣಾವಕಾಶ.
9 8 4 4 7 4 5 8 5 6



## ಶಿರಮಗೊಂಡನಹಳ್ಳಿಯಲ್ಲಿ ಚನ್ನಬಸವೇಶ್ವರ ರಥೋತ್ಸವ

ದಾವಣಗೆರೆ - ಶಿರಮಗೊಂಡನಹಳ್ಳಿ ಗ್ರಾಮದ ಶ್ರೀ ಚನ್ನಬಸವೇಶ್ವರ ಸ್ವಾಮಿ ರಥೋತ್ಸವವು ಸೋಮವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು. ಭಕ್ತಾದಿಗಳಿಗೆ ಶ್ರೀ ಚನ್ನಬಸವೇಶ್ವರ ದಾಸೋಹ ಸಮಿತಿಯಿಂದ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

## 11 ರಂದು ಚಿಗಟೇರಿಯಲ್ಲಿ ರಥೋತ್ಸವ



ಹರಪನಹಳ್ಳಿ, ಏ. 3- ತಾಲ್ಲೂಕಿನ ಇತಿಹಾಸ ಪ್ರಸಿದ್ಧ ಚಿಗಟೇರಿ ಶಿವನಾರದ ಮುನಿ ರಥೋತ್ಸವವು ಇದೇ ದಿನಾಂಕ 11ರ ಮಂಗಳವಾರ ಸಂಜೆ 5.30 ಕ್ಕೆ ಮೂಲಾ ನಕ್ಷತ್ರದ ಸಮಯದಲ್ಲಿ ವೈಭವದಿಂದ ನಡೆಯಲಿದೆ. ಮರುದಿನ ಬುಧವಾರ ಸಂಜೆ 5-00ಕ್ಕೆ ಓಕುಳಿ ನೆರವೇರಲಿದೆ ಎಂದು ಶ್ರೀ ನಾರದಮುನಿ ಸ್ವಾಮಿ ಸೇವಾ ಟ್ರಸ್ಟಿನ ಅಧ್ಯಕ್ಷರೂ ಆದ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ತಿಳಿಸಿದ್ದಾರೆ.

ಸಮುದಾಯ ಭವನದಲ್ಲಿ ನಿನ್ನೆ ನಡೆದ ಸಭೆಯಲ್ಲಿ ರಥೋತ್ಸವದ ಸಿದ್ಧತೆ ಬಗ್ಗೆ ಚರ್ಚಿಸಲಾಯಿತು. ಟ್ರಸ್ಟ್‌ನ ಸದಸ್ಯರುಗಳಾದ ಶಾಮನೂರು ಬಸಣ್ಣ, ಕಲಪನಹಳ್ಳಿ ಬಸವಲಿಂಗಪ್ಪ, ಪಲ್ಲಾಗಟ್ಟಿ ನಾಗರಾಜ್, ಹೊಳಲ್ಕೆರೆ ವೇದಮೂರ್ತಿ, ಹುಣಸಿಹಳ್ಳಿ ಜಾತಪ್ಪ, ಇಂಜಿನಿಯರ್ ಜಿ.ಬಿ.ಸುರೇಶಕುಮಾರ್ ಭಾಗವಹಿಸಿದ್ದರು. ಹರಪನಹಳ್ಳಿ ತಾಲ್ಲೂಕು ತಹಶೀಲ್ದಾರ್, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಪಿ.ಡಿ.ಓ., ಚಿಗಟೇರಿ ಗ್ರಾಮ ಪಂಚಾಯ್ತಿ ಅಧ್ಯಕ್ಷರು, ಸದ್ಯಸರು ಹಾಗೂ ಚಿಗಟೇರಿ ಗ್ರಾಮಸ್ಥರು ಸಭೆಯಲ್ಲಿ ಉಪಸ್ಥಿತರಿದ್ದರು.

## ಚುನಾವಣೆ : ದೂರು ನಿರ್ವಹಣಾ ಶಾಖೆ ಆರಂಭ

ದಾವಣಗೆರೆ, ಏ. 3- ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ-2023ರ ಹಿನ್ನಲೆಯಲ್ಲಿ ಚುನಾವಣೆ ಅಕ್ರಮಗಳನ್ನು ತಡೆಯಲು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯಲ್ಲಿ ದೂರು ನಿರ್ವಹಣಾ ಶಾಖೆ ದಿನದ 24 ಗಂಟೆಗಳ ಕಾಲ ಕಾರ್ಯನಿರ್ವಹಿಸುತ್ತಿದೆ. ಸಾರ್ವಜನಿಕರು ಚುನಾವಣಾ ಅಕ್ರಮಗಳು ಕಂಡುಬಂದಲ್ಲಿ ಕೂಡಲೇ ಸಹಾಯವಾಣಿ 18004251342 ಕರೆ ಮಾಡಬಹುದು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್ ತಿಳಿಸಿದ್ದಾರೆ.

## ಪಂಚಮಸಾಲಿಗೆ 2ಡಿ: ಸರ್ಕಾರಿ ಆದೇಶದ ಪ್ರತಿ ಸುಟ್ಟು ಆಕ್ರೋಶ



ಬೆಳಗಾವಿ, ಏ.3- ಪಂಚಮಸಾಲಿ ಸಮುದಾಯವನ್ನು ಪ್ರವರ್ಗ '2ಡಿ'ಗೆ ಸೇರಿಸಿ ರಾಜ್ಯ ಸರ್ಕಾರ ಹೊರಡಿಸಿದ ಆದೇಶದ ಪ್ರತಿಯನ್ನು ಮುಖಂಡರು ಇಂದು ಸುಟ್ಟು ಹಾಕಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇಲ್ಲಿನ ಚನ್ನಮ್ಮ ವೃತ್ತಕ್ಕೆ ಆಗಮಿಸಿದ ಮಾಜಿ ಶಾಸಕರಾದ ವಿನಯ ಕುಲಕರ್ಣಿ, ಎ.ಬಿ.ಪಾಟೀಲ, ವಿಜಯಾನಂದ ಕಾಶಪ್ಪನವರ ಅವರು, 'ಮೀಸಲಾತಿ ಹಂಚಿಕೆಯಲ್ಲಿ ಪಂಚಮಸಾಲಿ ಸಮಯದಾಯಕ್ಕೆ ಅನ್ಯಾಯ ಮಾಡಲಾಗಿದೆ' ಎಂದು ಆಪಾದಿಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

## 6ಕ್ಕೆ ಹಳೇಪೇಟೆಯಲ್ಲಿ ರಥೋತ್ಸವ



ದಾವಣಗೆರೆ ಹಳೇಪೇಟೆಯ ಶ್ರೀ ವೀರ ಭದ್ರೇಶ್ವರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 6 ರಂದು ನಡೆಯಲಿದೆ.

ರಥೋತ್ಸವ ಕಾರ್ಯಕ್ರಮದ ನಿಮಿತ್ತ ಇಂದು ಬೆಳಿಗ್ಗೆ 6 ಗಂಟೆಗೆ ಸ್ವಾಮಿಗೆ ರುದ್ರಾಭಿಷೇಕ ನಂತರ ಬೆಳಿಗ್ಗೆ 9 ಕ್ಕೆ ರುದ್ರ ಸಂತರ್ಪಣೆ ಇರಲಿದ್ದು, ನಾಳೆ ಬುಧವಾರ ಬೆಳಿಗ್ಗೆ 6 ಗಂಟೆಗೆ ಗುಗ್ಗಳ ಮತ್ತು ಅಗ್ನಿಕುಂಡ ಹಾಗೂ ಉತ್ಸವ ನಗರದ ಬೀದಿಗಳಲ್ಲಿ ಜರುಗಲಿದೆ. ನಾಡಿದ್ದು ಗುರುವಾರ ಸಂಜೆ 7 ಗಂಟೆಗೆ ರಥೋತ್ಸವ ನಡೆಯಲಿದ್ದು, ದಿನಾಂಕ 7 ರಂದು ರಾತ್ರಿ 8 ಗಂಟೆಗೆ ಓಕುಳಿ ಉತ್ಸವ ಜರುಗುವುದು.

## ಮತದಾರರ ಪಟ್ಟಿಯಲ್ಲಿನ ಹೆಸರು ಪರಿಶೀಲನೆಗೆ ಸೂಚನೆ

ದಾವಣಗೆರೆ, ಏ.3- ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ 2023ರ ವೇಳಾಪಟ್ಟಿಯನ್ನು ಈಗಾಗಲೇ ಹೊರಡಿಸಿದ್ದು, ಜಿಲ್ಲೆಯ ಎಲ್ಲಾ ಮತದಾರರು, ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಪರಿಶೀಲನೆ ಮಾಡಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ಚುನಾವಣಾ ಅಧಿಕಾರಿ ಪಿ.ಎನ್. ಲೋಕೇಶ್ ತಿಳಿಸಿದ್ದಾರೆ.

ವೋಟರ್ ಹೆಲ್ಪ್‌ಲೈನ್ ಆಪ್ ಡೌನ್ಲೋಡ್ ಮಾಡಿ ಮೊಬೈಲ್ ಸಂಖ್ಯೆಯೊಂದಿಗೆ ಲಾಗಿನ್ ಮಾಡಿ, ಓಟಿಪಿ ನಮೂದಿಸುವ ಮೂಲಕ ಮತದಾರರ ಪಟ್ಟಿಯಲ್ಲಿ ಹೆಸರು ಇರುವ ಬಗ್ಗೆ ಖಚಿತಪಡಿಸಿಕೊಳ್ಳಬಹು ದಾಗಿದೆ ಅಥವಾ _1950 ಟೋಲ್ ಫ್ರೀ ನಂಬರ್ ಕರೆಮಾಡಿ ಮಾಹಿತಿ ಪಡೆದುಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 21 ಕ್ಕೆ ವಕೀಲರ ಸಂಘದ ಚುನಾವಣೆ

ದಾವಣಗೆರೆ, ಏ.3- ಸ್ಥಳೀಯ ವಕೀಲರ ಸಂಘದ 2023-24 ಮತ್ತು 2024-25 ನೇ ಸಾಲಿನ ದ್ವೈವಾರ್ಷಿಕ ಸಾಲಿಗೆ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಹ ಕಾರ್ಯದರ್ಶಿ ಮತ್ತು ಒಬ್ಬ ಮಹಿಳಾ ಸದಸ್ಯೆ ಸೇರಿ, ಒಟ್ಟು 9 ಜನ ಕಾರ್ಯಕಾರಿ ಸಮಿತಿಯ ಸದಸ್ಯರ ಸ್ಥಾನಗಳಿಗಾಗಿ ಇದೇ ದಿನಾಂಕ 21 ರ ಶುಕ್ರವಾರ ಚುನಾವಣೆ ನಿಗದಿಯಾಗಿದೆ.

ಚುನಾವಣೆಯಲ್ಲಿ ಸ್ಪರ್ಧಿಸುವ ದಾವಣಗೆರೆ ವಕೀಲರ ಸಂಘದ ಆಜೀವ ಸದಸ್ಯರು ಇಂದಿನಿಂದ ಇದೇ ದಿನಾಂಕ 11 ರೊಳಗೆ ಅರ್ಜಿಯನ್ನು ಪಡೆದು ನಾಮಪತ್ರ ಸಲ್ಲಿಸಬಹುದಾಗಿದೆ ಎಂದು ಮುಖ್ಯ ಚುನಾವಣಾಧಿಕಾರಿ ಎಲ್. ದಯಾನಂದ ತಿಳಿಸಿದ್ದಾರೆ.

## ಇಂದು ಮಾಂಸ ಮಾರಾಟ ನಿಷೇಧ

ದಾವಣಗೆರೆ : ಮಹಾವೀರ ಜಯಂತಿ ಪ್ರಯುಕ್ತ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಇಂದು ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಮಾಂಸದ ಉದ್ದಿಮೆ ನಡೆಸುತ್ತಿರುವ ಉದ್ದಿಮೆದಾರರು ಉಲ್ಲಂಘಿಸಿದಲ್ಲಿ ಮಹಾನಗರ ಪಾಲಿಕೆ ಕಾಯ್ದೆಯ ಪ್ರಕಾರ ಕಾನೂನು ಕ್ರಮ ಜರುಗಿಸಲಾಗುವುದೆಂದು ಪಾಲಿಕೆಯ ಆರೋಗ್ಯಾಧಿಕಾರಿಗಳು ಎಚ್ಚರಿಸಿದ್ದಾರೆ.


STAFF REQUIRED

- Nursing Staff - 10 No.
- Duty Doctor - 4 No.
- ICU Staff - 6 No.
- Aaya - 6 No.

SUCHETHANA HOSPITAL

No. 284/1,2,3, 4th main Road, Opp. Vishweshwaraiah Park Gate, P.J. Extension, Davangere - 577 002.

08192 230203, +91 9742733116, 8095997444


## ಕುರ್ಕಿ ಶಿವಗಂಗಮ್ಮ ನಿಧನ



ದಾವಣಗೆರೆ ಜೀವನ್ ಬೀಮ ನಗರ ಹಳೇ ಪಂಪ್ ಹೌಸ್ ಹತ್ತಿರದ ವಾಸಿ

ಇ. ಗುರುಮೂರ್ತ್ಯಪ್ಪ ಇವರ ಪತ್ನಿ

**ಕುರ್ಕಿ ಶಿವಗಂಗಮ್ಮ**

ಅವರು ದಿನಾಂಕ 3.04.2023 ರ ಸೋಮವಾರ ಸಂಜೆ 5 ಕ್ಕೆ ನಿಧನರಾದರು. ಮೃತರಿಗೆ 85 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ನಾಲ್ವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.04.2023 ರ ಮಂಗಳವಾರ ಮಧ್ಯಾಹ್ನ 12 ಕ್ಕೆ ದಾವಣಗೆರೆ ತಾಲ್ಲೂಕು ಕುರ್ಕಿ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ : ಮೊ : 99167 93661, 98444 90017


ಅಭಿನಂದನೆಗಳು



ಶ್ರೀ ಆರ್.ಎಲ್.ಪ್ರಭಾಕರ್



ಶ್ರೀ ಕೆ.ಎಸ್. ರುದ್ರಶೆಟ್ಟಿ

ಎಸ್.ಕೆ.ಪಿ.ರಸ್ತೆಯ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನ ಸಂಘದ ನೂತನ ಅಧ್ಯಕ್ಷರಾಗಿ ಮರು ಆಯ್ಕೆಯಾಗಿರುವ ಶ್ರೀ ಆರ್.ಎಲ್.ಪ್ರಭಾಕರ್ ಮತ್ತು ಆಡಳಿತ ಮಂಡಳಿ ನಿರ್ದೇಶಕರಿಗೂ ಹಾಗೂ ಡಿಸಿಎಂ ಟೌನ್ ಶಿಪ್ ಶ್ರೀ ವಾಸವಿ ಸೇವಾ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಶ್ರೀ ಕೆ.ಎಸ್. ರುದ್ರಶೆಟ್ಟಿ ಅವರಿಗೆ ಹಾರ್ದಿಕ ಅಭಿನಂದನೆಗಳು.

ದಿವಂಗತ ಬಿ. ತಿಮ್ಮರಾಯಶ್ರೇಷ್ಠಿ ಮನೆತನದವರು, ಚೌಕೀಪೇಟೆ, ದಾವಣಗೆರೆ. ಇವರ ಪುತ್ರರಾದ :

- ಬಿ.ಟಿ ಅಶ್ವತ್ಥ್ ಮತ್ತು ಮಕ್ಕಳು
- ಬಿ.ಟಿ.ಅಶ್ವತ್ಥ್ ರಾಜ್ ಮತ್ತು ಮಕ್ಕಳು
  ನಿರ್ದೇಶಕರು, ಕರ್ನಾಟಕ ಆರ್ಯವೈಶ್ಯ ಮಹಾಸಭಾ, ಬೆಂಗಳೂರು.
- ಬಿ.ಟಿ. ವೃಕ್ಷರಾಜ್ ಮತ್ತು ಮಕ್ಕಳು
- ಬಿ.ಟಿ.ಪುಂಡರೀಕಾಕ್ಷ ಮತ್ತು ಮಕ್ಕಳು
- ಬಿ.ಟಿ.ಸುಪುತ್ರ ಮತ್ತು ಮಕ್ಕಳು
  ಅಧ್ಯಕ್ಷರು, ಶ್ರೀ ವಾಸವಿ ಅಭಿವೃದ್ಧಿ ಸಹಕಾರ ಸಂಘ, ದಾವಣಗೆರೆ ಹಾಗೂ

ಭೀಮಸಮುದ್ರದ ಎರಡುಕೆರೆ ಗೋವಿಂದಪ್ಪಶ್ರೇಷ್ಠಿ ವಂಶಸ್ಥರು.



SINCE 1998

ನಿಮ್ಮ ಯಶಸ್ಸಿನ ಪಯಣದಲ್ಲಿ

ಕನಸು ನನಸಾಗಿಸಲು ಸದಾ ನಿಮ್ಮೊಂದಿಗೆ

Since : 1998

WE ARE HIRING ಸಹ್ಯಾದ್ರಿ ಚಿಟ್ಸ್ (ಪ್ರೈ.) ಲಿ.

@ OUR NEW BRANCH

DAVANAGERE

Walk in Interview at,9th April-2023

Location - 1st floor Malabar Tyres Building. opposite Reliance smart bazar. P.B road Davangere. P-577002

JOB POSITION'S

DEVELOPMENT OFFICER

NUMBER OF VACANCIES-4

- Any experience in Financial sector
- Qualification any Degree
- Must owning a two wheeler
- Fresher's and experienced can also apply

RECEPTIONIST CUM OFFICE ASSISTANT... FEMALE

NUMBER OF VACANCIES-2

- Minimum qulification in any Degree
- Computer knowledge is compulsory
- Be good at communication skill
- Fresher's and experienced can also apply

Send us your CV and Portfolio

sahyadrichits@gmail.com

9844234303 -9945006345 -9620780203


## ಐಗೂರು ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಸಿ.ಬಿ. ಮಹೇಶ್ವರಪ್ಪ



ದಾವಣಗೆರೆ, ಏ.3- ತಾಲ್ಲೂಕಿನ ಗುಡಾಳು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿ.ಬಿ. ಮಹೇಶ್ವರಪ್ಪ ಅವರು ಆಯ್ಕೆಯಾಗಿದ್ದಾರೆ ಎಂದು ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಎಸ್. ಶಿವಕುಮಾರ್ ತಿಳಿಸಿದ್ದಾರೆ.

## ಅಭಿಷೇಕ್ ಬೇತೂರು ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ




ದಾವಣ ಗೆರೆ, ಏ.3- ಜಿಲ್ಲಾ ಕಾಂಗ್ರೆಸ್ ಅಲ್ಪ ಸಂಖ್ಯಾತರ ಘಟಕದ ಸಂಘಟನಾ ಕಾರ್ಯದರ್ಶಿಯಾಗಿ ಅಭಿಷೇಕ್ ಬೇತೂರು ನೇಮಕಗೊಂಡಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಲ್ಪ ಸಂಖ್ಯಾತರ ರಾಜ್ಯಾಧ್ಯಕ್ಷ ಕೆ. ಅಬ್ದುಲ್ ಜಬ್ಬಾರ್ ಅವರುಗಳ ಆದೇಶದ ಮೇರೆಗೆ ಈ ನೇಮಕ ಮಾಡಲಾಗಿದೆ.

## ನಗರದಲ್ಲಿ ಭಗವಾನ್ ಮಹಾವೀರ ಜಯಂತಿ

ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಭಗವಾನ್ ಮಹಾವೀರ ಜಯಂತಿಯನ್ನು ಇಂದು ಬೆಳಿಗ್ಗೆ 10 ಕ್ಕೆ ಜಿಲ್ಲಾಡಳಿತ ಭವನದಲ್ಲಿ ಸರಳ, ಸಾಂಕೇತಿಕವಾಗಿ ಆಚರಿಸಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


ಶ್ರೀ ಭಗವಾನ ಮಹಾವೀರ ಜನ್ಮಕಲ್ಯಾಣ ಮಹೋತ್ಸವ




JAIN POLYPACKS

M/S RAJALAXMI POLY SACKS SHRADHA PACKAGING

ಮಲ್ಟಿ ಕಲರ್ ಬಿ.ಓ.ಪಿ.ಪಿ. ಬ್ಯಾಗ್ಸ್, ಮೆಟಲೈಜಡ್ ಬ್ಯಾಗ್ಸ್, ಪೌಚ್ ಅಂಡ್.

ಸ್ಟಾಂಡ್ ಅಪ್ ಜಿಪ್‌ಲಾಕ್ ಪೌಚ್, ಮತ್ತು ಎಲ್ಲಾ ತರಹದ ಬ್ಯಾಗ್ ಗಳನ್ನು ತಯಾರಿಸುತ್ತೇವೆ

ಸಂಪರ್ಕಿಸಿ :- ಕೋಮಲ್ ಜೈನ್ 9845379555

PLOT NO. 13,15, 30, 31 KIADB, KARUR INDUSTRIAL AREA, DAVANAGERE - 577006.


# ಕೈಲಾಸ ಸಮಾರಾಧನೆ



ಜನನ 1954

ಮರಣ 28–03–2023

**ದಿ|| ಎ.ಕೆ. ನಾಗಪ್ಪ** ವಕೀಲರು,

ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು, ಸಂಘ ಸಂಸ್ಥೆಗಳ ಮಾಜಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು

ಹರಿಹರ ತಾ|| ಎರೇ ಬೂದಿಹಾಳ್ ಗ್ರಾಮದ ವಾಸಿ

ಶ್ರೀಮತಿ ಬಿ.ನೀಲಮ್ಮ ಮತ್ತು ಮಗನಾದ ಬಿ.ಎನ್.ರಂಗನಾಥಸ್ವಾಮಿ

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ: 28–03–2023ನೇ ಮಂಗಳವಾರ ಬೆಳಗ್ಗೆ 2.30ಕ್ಕೆ ನನ್ನ ಪೂಜ್ಯ ಪತಿಯವರಾದ **ಶ್ರೀ ಎ.ಕೆ.ನಾಗಪ್ಪ,** ವಕೀಲರು ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು, ಸಂಘ ಸಂಸ್ಥೆಗಳ ಮಾಜಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಸಮಾರಾಧನೆಯನ್ನು** ದಿನಾಂಕ: 05–04–2023ನೇ ಬುಧವಾರ ಬೆಳಿಗ್ಗೆ 10.00ಕ್ಕೆ ಎರೇ ಬೂದಿಹಾಳ್ ಗ್ರಾಮದ ಶ್ರೀ ಪಿ ಮತ್ತು ಬಿ ಬಸವನಗೌಡ್ರುರವರ ಫ್ರೌಢಶಾಲೆ ಆವರಣದಲ್ಲಿ ನೆರವೇರಿಸಲು ಗುರು–ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು**

ಶ್ರೀಮತಿ ಬಿ.ನೀಲಮ್ಮ, ಶ್ರೀಮತಿ ಎಸ್.ಗಾಯಿತ್ರಿದೇವಿ ಪತ್ನಿಯರು, ಮಕ್ಕಳು, ಮೊಮ್ಮಕ್ಕಳು ಮತ್ತು ಚಿಟಗಿ ರಂಗಜ್ಜ ವಂಶಸ್ಥರು, ಕುಟುಂಬವರ್ಗದವರು ಹಾಗೂ ಬೆಳ್ಳೂಡಿ ಬೇವಿನಮರ ವಂಶಸ್ಥರು, ಬಿ.ಕಲಪನಹಳ್ಳಿ ಅಂಚಿನಮನಿ ವಂಶಸ್ಥರು, ಆವರಗೆರೆ ಪೂಜಾರಿ ವಂಶಸ್ಥರು ಮತ್ತು ಎರೇ ಬೂದಿಹಾಳ್ ಗ್ರಾಮದವರು ಹಾಗೂ ಬಂಧು–ಮಿತ್ರರು.

ಬಿ.ಎನ್.ರಂಗನಾಥಸ್ವಾಮಿ ಮೊ: 73536 90666

ಸೂಚನೆ: ಆಹ್ವಾನ ಪತ್ರಿಕೆ ತಲುಪದೆ ಇದ್ದವರು ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte